RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ **Volume 148**	ಬೆಂಗಳೂರು, ಗುರುವಾರ, ಜೂನ್ ೨೦, ೨೦೧೩ (ಜ್ಯೇಷ್ಠ ೩೦, ಶಕ ವರ್ಷ ೧೯೩೫) **Bangalore, Thursday, June 20, 2013 (Jyeishta 30, Shaka Varsha 1935)**	ಸಂಚಿಕೆ ೨೫ **Issue 25**

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

INFRASTRUCTURE DEVELOPMENT SECRETARIAT

Subject : Release of funds to Administrative Training Institute, Mysore for training officers of Government Departments under PPP- Capacity Building Initiatives for the year 2012-l3 and 2013-14

Read :
1. G.O No. ID 32 ITS 2008 dated 08.09.2011.
2. G.O No. ID 32 ITS 2008 dated 11.10.2012.
3. Letter No. TRG. CR.126/2011-11 dated 21.01.2013 from Director General, Administrative Training Institute, Mysore.

PREAMBLE :

In the G.O read at (1) above, an amount of Rs. 11,88,00/- (Eleven Lakh Eighty Eight thousand only) was released towards creation of PPP Cell at ATI, Mysore and for conducting Capacity Building training regarding PPP projects for the financial year 2011-12.

2. In the G.O read at (2) above, an amount of Rs. 5,73,703/- (Five Lakh Seventy Three Thousand Seven Hundred & Three only) was released for the financial year 2012-13 towards conducting five training programmes on PPP till December 2012.

3. In the letter read at (3) above, the Director General, ATI, Mysore, has informed that two workshops on Best Practices in PPP are scheduled during first or third week of February 2013 in Mangalore at an estimate of Rs. 5 Lakh and during second week of March 2013 in Dharwad at an estimate of Rs. 4 Lakh. Hence a total amount of Rs 9,00,000/- (Nine Lakh only) is requested to release for the financial year 2012-13.

4. Also following proposals are made for the financial year 2013-14 with a request to release an amount of Rs. 109.00 Lakhs.

1	For organizing 12 training programmes @ Rs. 2.00 Lakh for each programme	Rs.24,00,000/-
2	Two Workshops (Mangalore & Gulbarga)	Rs. 10,00,000/-
3	Training cum Exposure Visits -Abroad	Rs. 30,00,000/-
4	Training cum Exposure Visits and participation in Exhibitions Seminar in India	Rs. 30,00,000/-
5	**Support to PPP Cell at ATI, Mysore** (a) Consultant-1 at Rs. 30,000/- per month	Rs. 3,60,000/-
	(b) Research Officer-1 at Rs. 20,000/- per month	Rs.2,40,000/-
	(c) Research Assistant-1 at Rs. 15,000/- per month	Rs. 1,80,000/-
	(d) Documentation and Publications	Rs. 6,00,000/-
	(e) Administrative Expenses at 10%	Rs. 1,20,000/-
	Total	**Rs. 15,00,000/-**
	Grand Total for the year 2013-14	**Rs. 1,09,00,000/-**

5. Hence the following order.

GOVERNMENT ORDER NO. ID 108 ITS 2012, BANGALORE, DATED 04th February 2012

Under the circumstances explained in the preamble and detailed examination of the proposal, Government is pleased to accord sanction to release Rs. 1,18,00,000/- (One Hundred & Eighteen Lakhs Only) to the Director General, Administrative Training Institute, Mysore for the activities as mentioned below:

1.	**For the year 2012-13 – Workshops on Best Practices in PPP**	
	a. Mangalore in 1st /3rd week of February 2013	Rs. 5,00,000/-
	b. Workshop at Dharwad during 2nd week of March 2013.	Rs.4,00,000/-
	Grand Total for the year 2012-13	**Rs.9,00.000/-**
2	**For the year 2013-14**	
	(i) For organizing 12 training programmes @ Rs. 2.00 Lakh for each programme	Rs.24,00,000/-
	(ii) Two Workshops (Mangalore & Gulbarga)	Rs. 10,00,000/-
	(iii) Training cum Exposure Visits -Abroad	Rs. 30,00,000/-
	(iv) Training cum Exposure Visits and participation in Exhibitions Seminar in India	Rs. 30,00,000/-
	(v) Support to PPP Cell at ATI, Mysore	
	(a) Consultant-1 at Rs. 30,000/- per month	Rs. 3,60,000/-
	(b) Research Officer-1 at Rs. 20,000/- per month	Rs.2,40,000/-
	(c) Research Assistant-1 at Rs. 15,000/- per month	Rs. 1,80,000/-
	(d) Documentation and Publications	Rs. 6,00,000/-
	(e) Administrative Expenses at 10%	Rs. 1,20,000/-
	Total	**Rs. 15,00,000/-**
	Grand Total for the year 2013-14	**Rs. 1,09,00,000/-**
	Grand Total for the year 2012-13 & 2013-14	**Rs. 1,18,00,000/-**

2. The expenditure shall be met out under the Budget Head 3451-00-090-1-17-059 Capacity Building – PPP Other Expenses (Plan) 2012-13.

3. The Director General, Administrative Training Institute, Mysore, is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore and the cheque/DD to be issued in favour of "Director General, Administrative Training Institute, Mysore".

4. Director General, Administrative Training Institute has to submit the expenditure details and utilization certificate to Infrastructure Development Department.

5. This order is issued in accordance with the delegation of financial powers to Principal Secretary/Secretary to Govt., vide G.O No. FD 04 TFP 2012 dated 27/04/2012.

By Order and in the name of the Governor of Karnataka,
B. SRIRAMA,
Under Secretary to Government,
Infrastructure Development Department.

P.R. 572

ಆರ್ಥಿಕ ಸಚಿವಾಲಯ

ಸರ್ಕಾರದ ಆದೇಶ ಸಂಖ್ಯೆ : ಆಇ 6 ಎಸ್‌ಆರ್‌ಪಿ 2013, ಬೆಂಗಳೂರು, ದಿನಾಂಕ : 15ನೇ ಮಾರ್ಚ್ 2013

ವಿಷಯ: ಸಮವಸ್ತ್ರ ಭತ್ಯೆ – ದರಗಳ ಪರಿಷ್ಕರಣೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ : ಆಇ 06 ಎಸ್‌ಆರ್‌ಪಿ 2011, ದಿನಾಂಕ 24–01–2011

2. ಸರ್ಕಾರಿ ಆದೇಶ ಸಂಖ್ಯೆ : ಆಇ 12 ಎಸ್‌ಆರ್‌ಪಿ 2012 (III), ದಿನಾಂಕ : 14–06–2012.

ಮೇಲೆ ಓದಲಾದ (1) ರಲ್ಲಿ ದಿನಾಂಕ 24–01–2011ರ ಆದೇಶದಲ್ಲಿ ರಾಜ್ಯಪಾಲರ ಸಚಿವಾಲಯದ ಕೆಲವೊಂದು ವರ್ಗದ ಹುದ್ದೆಗಳಿಗೆ ಸಮವಸ್ತ್ರ ಭತ್ಯೆಯನ್ನು ಮಂಜೂರು ಮಾಡಲಾಗಿರುತ್ತದೆ. ಮೇಲೆ (2) ರಲ್ಲಿ ಓದಲಾದ ದಿನಾಂಕ 14–06–2012ರ ಆದೇಶದಲ್ಲಿ ಸಮವಸ್ತ್ರ ಭತ್ಯೆಯ ದರಗಳನ್ನು ಪರಿಷ್ಕರಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ 14–06–2012 ರ ಸರ್ಕಾರಿ ಆದೇಶದಲ್ಲಿನ **"ರಾಜ್ಯ ಶಿಷ್ಟಾಚಾರ ಹಾಗೂ ಅತಿಥಿ ಗೃಹಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಶಿಷ್ಟಾಚಾರ)" ಶೀರ್ಷಿಕೆ** ನಂತರ, ಈ ಕೆಳಗಿನ ನಮೂದುಗಳನ್ನು ಸೇರ್ಪಡೆ ಮಾಡಿಕೊಳ್ಳತಕ್ಕದ್ದು.

ರಾಜ್ಯಪಾಲರ ಸಚಿವಾಲಯ :

1	ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು	2 ವರ್ಷಕ್ಕೊಮ್ಮೆ ರೂ. 15,000/–
2	ರಾಜ್ಯಪಾಲರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ (P.S. Grade II)	2 ವರ್ಷಕ್ಕೊಮ್ಮೆ ರೂ. 12,000/– (ಹೊಸದಾಗಿ ಮಂಜೂರಾತಿ ನೀಡಿದೆ)
3	ರಾಜ್ಯಪಾಲರ ಅಧೀನ ಕಾರ್ಯದರ್ಶಿಗಳು (2)	2 ವರ್ಷಕ್ಕೊಮ್ಮೆ ರೂ. 12,000/– (ಪ್ರತಿಯೊಬ್ಬರಿಗೆ)
4	ರಾಜ್ಯಪಾಲರ ವಿಶೇಷ ಕರ್ತವ್ಯಾಧಿಕಾರಿ (1)	2 ವರ್ಷಕ್ಕೊಮ್ಮೆ ರೂ. 12,000/–
5	ರಾಜ್ಯಪಾಲರ ಆಪ್ತ ಕಾರ್ಯದರ್ಶಿ (1)	2 ವರ್ಷಕ್ಕೊಮ್ಮೆ ರೂ. 12,000/–
6	ರಾಜ್ಯಪಾಲರ ಆಪ್ತ ಸಹಾಯಕ ಉ.ಕಾ.ವೃಂದ (1)	2 ವರ್ಷಕ್ಕೊಮ್ಮೆ ರೂ. 12,000/–
7	ಶಾಖಾಧಿಕಾರಿಗಳು (2)	2 ವರ್ಷಕ್ಕೊಮ್ಮೆ ರೂ. 8,000/– (ಪ್ರತಿಯೊಬ್ಬರಿಗೆ)
8	ಶಿ ಷ್ಟಾಚಾರ ಸಹಾಯಕ (1)	2 ವರ್ಷಕ್ಕೊಮ್ಮೆ ರೂ. 5,000/–

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುಂದರ ರಾಜ ಗುಪ್ತ,

ಸರ್ಕಾರದ ಉಪ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸೇವೆಗಳು–2)

P.R. 573
SC - 50

REVENUE SECRETARIAT

Subject : Issue of Licence/Renewal of Licence to poisonous items.

Read :
1) Notification No. DPAR 12 ARB 2008 Dated:09.06.2009.
2) Government Order No. RD 116 SaMiThi 2009, Dated: 20.10.2009
3) Letter No. Nil Dated: 24.10.2009 of the Drugs Controller, Bangalore, addressed to Principal Secretary to Government, Revenue Department.

PREAMBLE :

In Notification Dated:09.06.2009 read at (1) above, Government have allocated sub heading "12.Poisons Act and the rules made thereunder." to Revenue Department from Health and Family Welfare Department by Amending the Karnataka Government (Allocation of Business) (Amendment) Rules, 1977."

In Government Order Dated: 20.10.2009 read at (2) above instructions issued that the files relating to the issue/renewal of licence to poisonous items were to be dealt by Revenue Department. In Letter dated: 24.10.2009 read at (3) above, the Drugs Controller has sent 31 (thirty one) files to the Revenue Department.

The Licence/Renewal of poisons proposals was issuing by the Drugs Controller earlier. After due local verification/spot inspection of the organization by the Government and felt that issue of licence on the poisonous items by the Drugs Controller is not necessary and decides to delegate the power to the concerned Deputy Commissioner of the District for the issue/renewal of licence to the poisonous items. The Deputy Commissioner of the concerned district will have to make necessary local verification/spot inspection of the organization from the concerned Drugs Inspector through the Drugs Controller, Bangalore by following the procedure which was being followed by the Drugs Controller.

Hence the Order.

GOVERNMENT ORDER NO. RD 03 RED 2012, BANGALORE, DATED 29th January 2013

Government are pleased to delegate the powers of the issue of licence/renewal to the poisonous items to the respective Deputy Commissioner of the District.

The Deputy Commissioner of the concerned District shall make necessary local verification/spot inspection of the organization through Officers of the concerned Drugs Inspector/Drugs Controller, Bangalore, duly obtaining report/recommendation about the issue of licence/renewal to the concerned Firms/Organizations & scrutinize the application of the issual of Licence/Renewal as the case may be, as per the provisions of the Poisons Act, 1919 and issue the necessary Licence/Renewal Order.

The detailed procedure for the issue of licence/renewal of poisonous item to the Firms/Organizations is appended to this Order.

By Order and in the name of the Governor of Karnataka,

LALITHA H. HANDIGOL,

Under Secretary to Government,

Revenue Department (Rehabilitation)

Annexure to the G.O. No. RD 03 RED 2012, BANGALORE, DATED: 29/0112013.

1. The Organization/Firm shall make the application to the Deputy Commissioner of the District concerned in the prescribed form before three (3) months prior to the commencement of the business.
2. The Organization/ Firm shall make the application for the renewal of licence to the Deputy Commissioner of the district concerned- in prescribed Form before one (1) month of the expiry of the licence for the renewal.
3. The licence/renewal will be issued for one year only from the first day of April and it will expire on the 31st March.

LALITHA H. HANDIGOL,
Under Secretary to Government,
Revenue Department (Rehabilitation)

P.R. 574
SC - 500

ಕಂದಾಯ ಸಚಿವಾಲಯ

ವಿಷಯ: ಪ್ರವಾಹ ಸಂದರ್ಭದಲ್ಲಿ ಜನರನ್ನು ರಕ್ಷಿಸಲು ಭಾರತೀಯ ವಾಯು ಪಡೆಯ ನೆರವು ಪಡೆದ ಬಾಬ್ತು ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:
1. ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಪತ್ರ ಸಂಖ್ಯೆ: 4313/SO(P)/D(Air.II) 07, Dated: 17-01-2013
2. NDMA/NDRF/Karnataka flood/244-I/2013, Dated: 20-02-2013

ಪ್ರಸ್ತಾವನೆ:

2005ರಿಂದ 2009ರವರೆಗೆ ಕರ್ನಾಟಕದಲ್ಲಿನ ಪ್ರವಾಹ ಸಂದರ್ಭದಲ್ಲಿ ನೆರೆಪೀಡಿತ ಪ್ರದೇಶಗಳ ವೀಕ್ಷಣೆ, ಜನರ ಶೋಧನೆ ಹಾಗೂ ರಕ್ಷಣಾ ಕಾರ್ಯಗಳಿಗೆ ಭಾರತೀಯ ವಾಯುಪಡೆಯಿಂದ ವಿಮಾನ ಹಾಗೂ ಹೆಲಿಕಾಪ್ಟರ್ ಸೇವೆಯನ್ನು ಪಡೆದ ಬಾಬ್ತು ರೂ. 2,61,35,167/-ಗಳನ್ನು ಭಾರತೀಯ ರಕ್ಷಣಾ ಇಲಾಖೆಗೆ ಹಾಗೂ ರೂ. 78,26,500/-ಗಳನ್ನು ಎನ್.ಡಿ.ಎಂ.ಎ.ಗೆ ಸೇರಿ ಒಟ್ಟು ರೂ. 3,39,61,667/-ಗಳನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ (1) ಮತ್ತು (2)ರ ಪತ್ರಗಳಲ್ಲಿ ಭಾರತೀಯ ರಕ್ಷಣಾ ಸಚಿವಾಲಯ ಮತ್ತು ಎನ್.ಡಿ.ಎಂ.ಎ.ರವರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 95 ಇಟಿಸಿ 2012, ಬೆಂಗಳೂರು, ದಿನಾಂಕ: 27ನೇ ಮಾರ್ಚ್, 2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2005ರಿಂದ 2009ರವರೆಗೆ ಕರ್ನಾಟಕದಲ್ಲಿನ ಪ್ರವಾಹ ಸಂದರ್ಭದಲ್ಲಿ ನೆರೆಪೀಡಿತ ಪ್ರದೇಶಗಳ ವೀಕ್ಷಣೆ, ಜನರ ಶೋಧನೆ ಹಾಗೂ ರಕ್ಷಣಾ ಕಾರ್ಯಗಳಿಗೆ ಭಾರತೀಯ ವಾಯುಪಡೆಯಿಂದ ವಿಮಾನ ಹಾಗೂ ಹೆಲಿಕಾಪ್ಟರ್ ಸೇವೆಯನ್ನು ಪಡೆದ ಬಾಬ್ತು ರೂ. 2,61,35,167/-ಗಳನ್ನು ಭಾರತೀಯ ರಕ್ಷಣಾ ಇಲಾಖೆಗೆ ಹಾಗೂ ರೂ. 78,26,500/-ಗಳನ್ನು ಎನ್.ಡಿ.ಎಂ.ಎ.ಗೆ ಸೇರಿ ಒಟ್ಟು **ರೂ. 3,39,61,667/-** ಗಳನ್ನು (ರೂ. ಮೂರು ಕೋಟಿ ಮೂವತ್ತೊಂಭತ್ತು ಲಕ್ಷದ ಅರವತ್ತೊಂದು ಸಾವಿರದ ಆರುನೂರ ಅರವತ್ತೇಳು ಮಾತ್ರ) ಕಂಟ್ರೋ**ಲ್ ಆಫ್ ಡಿಫನ್ಸ್, ಅಕೌಂಟ್ಸ್** (ಎ.ಎಫ್.) **ಆರ್.ಕೆ. ಪುರಂ, ನವದೆಹಲಿ,** ಇವರಿಗೆ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಸದರೀ ವೆಚ್ಚವನ್ನು ವಿಧಾನಸೌಧದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿರುವ ಎಸ್.ಡಿ.ಆರ್.ಎಫ್. ಉಳಿತಾಯ ಖಾತೆ **ಸಂಖ್ಯೆ-54001150679** ಉಳಿಕೆ ಮೊತ್ತದಿಂದ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಎಸ್. ಸರೋಜಮ್ಮ,
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ. (ವಿ.ನಿ. ಹಾಗೂ ನೋಂದಣಿ ಮತ್ತು ಮುದ್ರಾಂಕ)

P.R. 587

ಕಂದಾಯ ಸಚಿವಾಲಯ

ವಿಷಯ: 2012-13ನೇ ಸಾಲಿನಲ್ಲಿ ಬರಪೀಡಿತ ಎಂದು ಘೋಷಿಸಿರುವ ತಾಲ್ಲೂಕುಗಳಲ್ಲಿನ ರೈತರ ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ನೀಡುವ ಬಗ್ಗೆ

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 348 ಟಿಎನ್‌ಆರ್ 2012, ದಿನಾಂಕ 8ನೇ ಮಾರ್ಚ್, 2013

ಪ್ರಸ್ತಾವನೆ:

ಮೇಲೆ ಓದಲಾದ ಆದೇಶದಲ್ಲಿ 2012-13ನೇ ಸಾಲಿನಲ್ಲಿ ಮಳೆಯ ವೈಫಲ್ಯದಿಂದ ಬರಗಾಲ ಪೀಡಿತ ಪ್ರದೇಶಗಳೆಂದು ಘೋಷಿಸಿರುವ 157 ತಾಲ್ಲೂಕುಗಳಲ್ಲಿನ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಇನ್‌ಪುಟ್ ಸಬ್ಸಿಡಿ ನೀಡಲು ಒಟ್ಟು ರೂ. 32228.40 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು. ಆದರೆ ಕೊಪ್ಪಳ, ಬಿಜಾಪುರ ಮತ್ತು ಗದಗ ಜಿಲ್ಲೆಗಳಲ್ಲಿ ಇನ್‌ಪುಟ್ ಸಬ್ಸಿಡಿ ನೀಡಲು ಅನುದಾನದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ರೂ. 2.00 ಕೋಟಿ ಬಿಜಾಪುರ ಜಿಲ್ಲಾಧಿಕಾರಿಗಳಿಗೆ ರೂ. 2.00 ಕೋಟಿ ಹಾಗೂ ಗದಗ ಜಿಲ್ಲಾಧಿಕಾರಿಗಳಿಗೆ ರೂ. 1.44 ಕೋಟಿ ಸೇರಿ ಒಟ್ಟು ರೂ. 5.44 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 348 ಟಿಎನ್‌ಆರ್ 2013 (ಭಾಗ-1), ಬೆಂಗಳೂರು, ದಿನಾಂಕ: 27ನೇ ಮಾರ್ಚ್, 2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2012–13ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಿಸಿರುವ ತಾಲ್ಲೂಕುಗಳಲ್ಲಿನ ರೈತರಿಗೆ ಇನ್‌ಪುಟ್ ಸಬ್ಸಿಡಿ ಹೆಚ್ಚುವರಿಯಾಗಿ ಈ ಕೆಳಕಂಡಂತೆ ಜಿಲ್ಲಾಧಿಕಾರಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಕ್ರ.ಸಂ.	ಜಿಲ್ಲೆ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)
1	ಕೊಪ್ಪಳ	200.00
2	ಬಿಜಾಪುರ	200.00
3	ಗದಗ	144.00
	ಒಟ್ಟು	**544.00**

(ರೂಪಾಯಿ ಐದುನೂರ ನಲವತ್ತನಾಲ್ಕು ಲಕ್ಷಗಳು ಮಾತ್ರ)

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಲೆಕ್ಕ ಶೀರ್ಷಿಕೆ 2245–01–800–1–02–100 (ಯೋಜನೇತರ) ಅಡಿಯಲ್ಲಿ ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್. ಪಿ.ಡಿ. ಖಾತೆಗೆ ಜಮಾ ಮಾಡಿದ ನಂತರ ರೈತರಿಗೆ ವಿಳಂಬ ಮಾಡದೇ ಅನುದಾನ ಬಿಡುಗಡೆ ಮಾಡುವುದು.

ಈ ಅನುದಾನವನ್ನು ಆದೇಶ ಹೊರಡಿಸಿದ 15 ದಿನಗಳಲ್ಲಿ ವಿತರಣೆ ಮಾಡಿ ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ–7)ರ ಟಿಪ್ಪಣಿ ಸಂಖ್ಯೆ: ಆಇ: 601/ವೆಚ್ಚ–7/2012, ದಿನಾಂಕ: 07–03–13ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಎಸ್. ಸರೋಜಮ್ಮ,
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ. (ವಿ.ನಿ. ಹಾಗೂ ನೋಂದಣಿ ಮತ್ತು ಮುದ್ರಾಂಕ)

P.R. 588

ಕಂದಾಯ ಸಚಿವಾಲಯ

ವಿಷಯ: ಬಳ್ಳಾರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ವೈರ್‌ಲೆಸ್ ನೆಟ್‌ವರ್ಕ್ ಅನುಷ್ಠಾನ ಮತ್ತು ದುರಸ್ಥಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:
1. ಬಳ್ಳಾರಿ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಪ್ರ.ವಿ./34/2012–13, ದಿನಾಂಕ 10ನೇ ಜನವರಿ, 2013
2. ಹಾವೇರಿ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಹಹಯೋ:ವಹಿ/13/2012–13, ದಿನಾಂಕ: 19ನೇ ಫೆಬ್ರವರಿ 2013

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆಯ ವಿವಿಧ ಸರ್ಕಾರಿ ಕಛೇರಿ ಹಾಗೂ ಅಧಿಕಾರಿಗಳ ವಾಹನಗಳಿಗೆ ಅಳವಡಿಸಿರುವ ವೈರ್‌ಲೆಸ್ ನೆಟ್‌ವರ್ಕ್ ಸರಿಯಾಗಿ ಕಾರ್ಯನಿರ್ವಹಿಸದ ಕಾರಣ ಸದರಿ ವೈರ್‌ಲೆಸ್ ನೆಟ್‌ವರ್ಕ್ ದುರಸ್ಥಿಗಾಗಿ ರೂ. 4.90 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹಾಗೂ ಮೇಲೆ (2)ರಲ್ಲಿ ಓದಲಾದ ಹಾವೇರಿ ಜಿಲ್ಲಾಧಿಕಾರಿಗಳು 13ನೇ ಹಣಕಾಸು ಯೋಜನೆಯ ಕ್ಯಾಪಾಸಿಟಿ ಬಿಲ್ಡಿಂಗ್‌ನ ಅನುದಾನದಲ್ಲಿ ಜಿಲ್ಲೆಯಲ್ಲಿ ವಿಪತ್ತು ನಿರ್ವಹಣಾ ಕೇಂದ್ರದ ವೈರ್‌ಲೆಸ್ ನೆಟ್‌ವರ್ಕ್ ಅಳವಡಿಸಲು ರೂ. 11.00 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು ಸದರಿ ನೆಟ್‌ವರ್ಕ್ ಸ್ಥಾಪನೆಗೆ ಹೆಚ್ಚುವರಿಯಾಗಿ ರೂ. 6,55,960/–ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸರ್ಕಾರವು ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ರು. 4.90 ಲಕ್ಷಗಳನ್ನು ಹಾಗೂ ಹಾವೇರಿ ಜಿಲ್ಲಾಧಿಕಾರಿಗಳಿಗೆ ರೂ. 5.00 ಲಕ್ಷ ಬಿಡುಗಡೆ ಮಾಡಲು ನಿರ್ಧರಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 58 ಟಿಎನ್‌ಆರ್ 2013, ಬೆಂಗಳೂರು, ದಿನಾಂಕ: 27ನೇ ಮಾರ್ಚ್, 2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪಿಸಿರುವ ವೈರ್‌ಲೆಸ್ ನೆಟ್‌ವರ್ಕ್ ದುರಸ್ಥಿಗಾಗಿ ಹಾಗೂ ಹಾವೇರಿ ಜಿಲ್ಲೆಯಲ್ಲಿ ವೈರ್‌ಲೆಸ್ ನೆಟ್‌ವರ್ಕ್ ಸ್ಥಾಪಿಸಲು ಹೆಚ್ಚುವರಿಯಾಗಿ ಬೇಕಿದ್ದ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

ಕ್ರ.ಸಂ.	ಜಿಲ್ಲೆ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)
1	ಬಳ್ಳಾರಿ	4.90
2	ಹಾವೇರಿ	5.00
	ಒಟ್ಟು	**9.90**

(ರೂಪಾಯಿ ಒಂಭತ್ತು ಲಕ್ಷದ ತೊಂಭತ್ತು ಸಾವಿರ ಮಾತ್ರ)

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಲೆಕ್ಕ ಶೀರ್ಷಿಕೆ 2245–80–101–0–06–100 (ಯೋಜನೇತರ) ಅಡಿಯಲ್ಲಿ ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿಕೊಳ್ಳತಕ್ಕದ್ದು.

ಹಾವೇರಿ ಜಿಲ್ಲಾಧಿಕಾರಿಗಳು ವೈರ್‌ಲೆಸ್ ನೆಟ್‌ವರ್ಕ್ ಅಳವಡಿಸಲು ಕಾರ್ಯವನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮೂಲಕ ಕಾರ್ಯಗತಗೊಳಿಸಲು ಸೂಚಿಸಿದೆ.

ಅನುದಾನ ವೆಚ್ಚ ಮಾಡಿದ್ದಕ್ಕೆ ಸಂಬಂಧಿಸಿದಂತೆ ಹಣ ಬಳಕೆ ಪತ್ರವನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಎಸ್. ಸರೋಜಮ್ಮ,
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ. (ವಿ.ನಿ. ಹಾಗೂ ನೋಂದಣಿ ಮತ್ತು ಮುದ್ರಾಂಕ)

P.R. 589

ಕಂದಾಯ ಸಚಿವಾಲಯ

ವಿಷಯ: ಚುನಾವಣೆ ಹಿನ್ನೆಲೆಯಲ್ಲಿ ತಾಲ್ಲೂಕು ಮಟ್ಟದ ಪ್ರಕೃತಿ ಪರಿಹಾರ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 372 ಟಿಎನ್‌ಆರ್ 2006, ದಿನಾಂಕ: 10–10–2006

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ದೃಷ್ಟಿಯಿಂದ ತಾಲ್ಲೂಕು ಮಟ್ಟದ ಪ್ರಕೃತಿ ವಿಕೋಪ ಪರಿಹಾರ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿತ್ತು.

1. ಸಂಬಂಧಿಸಿದ ವಿಧಾನಸಭಾ ಸದಸ್ಯರು – ಅಧ್ಯಕ್ಷರು
2. ಸಂಬಂಧಿಸಿದ ವಿಧಾನಪರಿಷತ್ ಸದಸ್ಯರು – ಸದಸ್ಯರು
3. ತಾಲ್ಲೂಕು ಪಂಚಾಯತ್ ಅಧ್ಯಕ್ಷರು – ಸದಸ್ಯರು
4. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು – ಸದಸ್ಯರು
5. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪಂಚಾಯತ್ – ಸದಸ್ಯರು
6. ತಹಶೀಲ್ದಾರ್ – ಸದಸ್ಯ ಕಾರ್ಯದರ್ಶಿ

ಆದರೆ ದಿನಾಂಕ: 20–03–2013ರಂದು ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಾಗಿರುತ್ತದೆ. ಆದುದರಿಂದ ಚುನಾಯಿತ ಪ್ರತಿನಿಧಿಗಳನ್ನು ಹೊರತುಪಡಿಸಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಪ್ರಕೃತಿ ವಿಕೋಪ ಪರಿಹಾರ ಸಮಿತಿಯನ್ನು ಪುನರ್ ರಚಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 81 ಟಿಎನ್‌ಆರ್ 2013, ಬೆಂಗಳೂರು, ದಿನಾಂಕ: 25ನೇ ಮಾರ್ಚ್, 2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಪ್ರಕೃತಿ ವಿಕೋಪ ಪರಿಹಾರ ಸಮಿತಿಯನ್ನು ಪುನರ್ ರಚಿಸಿ ಆದೇಶಿಸಿದೆ.

1. ಉಪವಿಭಾಗಾಧಿಕಾರಿಗಳು – ಅಧ್ಯಕ್ಷರು
2. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು – ಸದಸ್ಯರು
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪಂಚಾಯತ್ – ಸದಸ್ಯರು
4. ತಹಶೀಲ್ದಾರ್ – ಸದಸ್ಯ ಕಾರ್ಯದರ್ಶಿ

ಈ ಸಮಿತಿಯು ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ.

1. ಬಿಡುಗಡೆಯಾದ ಅನುದಾನಕ್ಕೆ ತಕ್ಕಂತೆ ಪ್ರಕೃತಿ ವಿಕೋಪ ಪರಿಹಾರ ಕಾಮಗಾರಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿ ಮಾರ್ಗಸೂಚಿಗಳನ್ವಯ ಯೋಜನೆ ತಯಾರಿಸುವುದು.
2. ಗಂಜಿ ಕೇಂದ್ರ/ಗೋಶಾಲೆ ತೆರೆಯಲು ಜಿಲ್ಲಾ ಮಟ್ಟ ಸಮಿತಿಗೆ ಶಿಫಾರಸ್ಸು ಮಾಡುವುದು.
3. ಪ್ರಕೃತಿ ವಿಕೋಪ ಪರಿಹಾರ ಕಾಮಗಾರಿಗಳ ಅನುಷ್ಠಾನ ಹಾಗೂ ಉಸ್ತುವಾರಿ ಇತ್ಯಾದಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ. ಆನಂದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ವಿ.ನಿ.ಮತ್ತು ಮುದ್ರಾಂಕ–2)

P.R. 590

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ: ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಆಪತ್ ಬಂಡವಾಳ ನಿಧಿ (Venture Capital Fund) ಯೋಜನೆಯಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಐ 234 ಎಸ್‌ಪಿಐ 2010, ದಿನಾಂಕ: 16–09–2011
2. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ: ಎಂಎಸ್‌ಎಂಇ: ಕೈವಿಅ:ವೆಕ್ಯಾಫ:2011–12, ದಿನಾಂಕ: 10–01–2011
3. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ: ಎಂಎಸ್‌ಎಂಇ: ಕೈವಿಅ:ವೆಕ್ಯಾಫ:2011–12, ದಿನಾಂಕ: 16–11–2011 27–01–2012 ಮತ್ತು 16–07–2012
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (KSIDC Ltd.,) ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: D.O. NO. DGM(FSD)/1227/2012-13, ದಿನಾಂಕ: 07–09–2012

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ 2011–12ನೇ ಸಾಲಿನ ಲೆಕ್ಕಶೀರ್ಷಿಕೆ "4852–02–800–0–04" Venture Capital Fund for Small & Medium Enterprises-211-Investment (Plan)" ಅಡಿ ರೂ. 100.00 ಲಕ್ಷಗಳನ್ನು ಸರ್ಕಾರದ ವಂತಿಗೆಯಾಗಿ KSIIDC Ltd., ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಓದಲಾದ (3)ರ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಸಧ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ KARVEN Fund ನಲ್ಲಿ ರೂ. 100.00 ಲಕ್ಷಗಳನ್ನು ತೊಡಗಿಸಲು KSIIDC Ltd., ಸಂಸ್ಥೆಗೆ ಸಾಧ್ಯವಾಗದೇ ಇರುವುದರಿಂದ 2011–12ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (2)ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, 2011–12ನೇ ಆರ್ಥಿಕ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿಲ್ಲದ ಕಾರಣ 2012–13ನೇ ಸಾಲಿನಲ್ಲಿ Venture Capital Fund ಯೋಜನೆಯನ್ನು ಅನುಷ್ಠಾನಗೊಳಿಸಲು ಹಂಚಿಕೆ ಮಾಡಲಾಗಿರುವ ರೂ. 200.00 ಲಕ್ಷಗಳಿಂದ ರೂ. 150.00 ಲಕ್ಷಗಳನ್ನು ಸರ್ಕಾರದ ಪಾಲೆಂದು ಪರಿಗಣಿಸಿ 2012–13ನೇ ಸಾಲಿನ ಲೆಕ್ಕಶೀರ್ಷಿಕೆ "4852–03–004–0–02" Venture Capital Fund for Small & Medium Enterprises-211-Investment (Plan)" ಅಡಿ KSIIDC Ltd., ಸಂಸ್ಥೆಗೆ ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (4)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (KSIIDC Ltd.) ಕೋರಿಕೆಯ ಮೇರೆಗೆ, ಸದರಿ ಅನುದಾನವನ್ನು KSIIDC Ltd., ಸಂಸ್ಥೆಗೆ ಬಿಡುಗಡೆ ಮಾಡಬೇಕೆಂದು ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಶಿಫಾರಸ್ಸು ಮಾಡಿ ತಡೆಪಟ್ಟಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 234 ಎಸ್‌ಪಿಐ 2010, ಬೆಂಗಳೂರು, ದಿನಾಂಕ: 28ನೇ ಮಾರ್ಚ್, 2013

2012–13ನೇ ಸಾಲಿನ ಲೆಕ್ಕಶೀರ್ಷಿಕೆ "4852–03–004–0–02" Venture Capital Fund for Small & Medium Enterprises-211-Investment (Plan)" ಅಡಿ ಸರ್ಕಾರದ ವತಿಯಿಂದ KARVEN Fund ನ ವಂತಿಗೆಯಾಗಿ ರೂ. 100.00 ಲಕ್ಷ (ಒಂದು ನೂರು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು KSIIDC Ltd., ಸಂಸ್ಥೆಗೆ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಆಪತ್ ಬಂಡವಾಳ ನಿಧಿಯಾಗಿ ಬಿಡುಗಡೆ ಮಾಡಲಾಗಿದೆ.

ಹಣ ಸ್ವೀಕೃತಿ ರಶೀತಿಯ ಮೇಲೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಯಿಂದ ಹಣ ಪಡೆಯಲು ವ್ಯವಸ್ಥಾಪಕ ನಿರ್ದೇಶಕರು, KSIIDC Ltd., ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 1262 Exp-I/12, ದಿನಾಂಕ: 26–03–2013ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಶಿವಶಂಕರ್ ನಾಯಕ್ ಎಲ್.
ಪೀಠಾಧಿಕಾರಿ (ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

P.R. 591

ಲೋಕೋಪಯೋಗಿ, ಬಂದರುಗಳು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಕೊಪ್ಪಳ ನಗರದ ಮಧ್ಯಭಾಗದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 63ರ ಉಳಿದ ಭಾಗಗಳನ್ನು ಮತ್ತು 5 ವೃತ್ತಗಳನ್ನು ಅಂದಾಜು ಮೊತ್ತ ರೂ. 17.38 ಕೋಟಿಗಳಲ್ಲಿ ನಿರ್ಮಾಣ ಮಾಡುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ:
1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡರವರ ಪತ್ರ ಸಂಖ್ಯೆ: ಮುಇಂ(ಉ):ತಾಂಸ–6:ಸಇಂ–3:ಕೊವಿ:2012–13:10096, ದಿನಾಂಕ: 17–01–2013
2. ಸರ್ಕಾರದ ಆದೇಶ ಸಂಖ್ಯೆ: ಲೋಇ 27 ಸಿಆರ್‌ಎಂ 2013, ದಿನಾಂಕ: 31–01–2013

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 31–01–2013ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ನಿಯಮ 17 ಮತ್ತು ಮೊದಲನೇ ಷೆಡ್ಯೂಲ್‌ನ ಐಟಂ 15ರನ್ವಯ, ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು, ಕೊಪ್ಪಳ ನಗರದ ಮಧ್ಯ ಭಾಗದಲ್ಲಿ ಹಾಯ್ದುಹೋಗುವ ರಸ್ತೆಯು ರಾಷ್ಟ್ರೀಯ ಹೆದ್ದಾರಿ–63ರಲ್ಲಿ ಬಿಟ್ಟುಹೋಗಿರುವ ಭಾಗಗಳನ್ನು ಅಭಿವೃದ್ಧಿ ಪಡಿಸಲು ಹಾಗೂ 5 ವೃತ್ತಗಳನ್ನು (ಬಸವೇಶ್ವರ ವೃತ್ತ, ಭೀಮರಾಯ ವೃತ್ತ, ಕನಕದಾಸ ವೃತ್ತ, ಅಶೋಕ ವೃತ್ತ ಹಾಗೂ ಶಾಸ್ತ್ರಿ ವೃತ್ತ) ರೂ. 1738.00 ಲಕ್ಷಗಳ (ಒಂದು ಸಾವಿರದ ಏಳುನೂರ ಮೂವತ್ತೆಂಟು ಲಕ್ಷಗಳು) ಅಂದಾಜು ವೆಚ್ಚದಲ್ಲಿ ಅಂದಾಜು ಮೊತ್ತದ ಮೂರನೇ ಒಂದು ಭಾಗವಾದ ರೂ. 579 ಲಕ್ಷಗಳ

(ಐದುನೂರ ಎಪ್ಪತ್ತೊಂಭತ್ತು ಲಕ್ಷಗಳು) ಅನುದಾನವನ್ನು ಒದಗಿಸುವುದರೊಂದಿಗೆ 2012–13ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಸೇರ್ಪಡಿಸಿ ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

2. ಅದರಂತೆ, 2012–13ನೇ ಸಾಲಿನಲ್ಲಿ ಹೊಸ ಕಾಮಗಾರಿಗಳಿಗಾಗಿ ಒದಗಿಸಲಾದ ಅನುದಾನದಲ್ಲಿ ಈಗಾಗಲೇ ಹೊಸ ಕಾಮಗಾರಿಗಳ ಪಟ್ಟಿ ತಯಾರಿಸಲಾಗಿರುವುದರಿಂದ, ಈ ಕಾಮಗಾರಿಯನ್ನು ಸಹ 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಬೇಕಾದಲ್ಲಿ, ಅಂದಾಜು ಮೊತ್ತ ರೂ. 17.38 ಕೋಟಿಗಳ ಶೇಕಡ 33 ರಷ್ಟು ಅಂದರೆ ರೂ. 5.79 ಕೋಟಿಗಳ ಹೆಚ್ಚುವರಿ ಅನುದಾನ ಅವಶ್ಯಕತೆ ಇದ್ದು, ಆರ್ಥಿಕ ಇಲಾಖೆಯು ಹೆಚ್ಚುವರಿ ಅನುದಾನ ಒದಗಿಸಲು ಸಾಧ್ಯವಿಲ್ಲವೆಂದು ನೀಡಿದ ಅಭಿಪ್ರಾಯದ ಹಿನ್ನೆಲೆಯಲ್ಲಿ, ಈ ಪ್ರಸ್ತಾವನೆಯನ್ನು ಹೆಚ್ಚುವರಿ ಅನುದಾನದ ಸಲುವಾಗಿ ಕರ್ನಾಟಕ ಸರ್ಕಾರದ (ವ್ಯವಹಾರಗಳು ನಿರ್ವಹಣೆ) ನಿಯಮಗಳು 1977ರ ನಿಯಮದ ನಿಯಮ 17 ಹಾಗೂ ಮೊದಲನೇ ಷೆಡ್ಯೂಲ್‌ನ ಐಟಂ 15ರನ್ವಯ ಸಚಿವ ಸಂಪುಟದ ಮುಂದೆ ಮಂಡಿಸಲಾಯಿತು.

3. ಸಚಿವ ಸಂಪುಟವು ನೀಡಿದ ಅನುಮೋದನೆಯ ಅನುಸಾರ, ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 27 ಸಿಆರ್‌ಎಂ 2013, ಬೆಂಗಳೂರು, ದಿನಾಂಕ: 14ನೇ ಮಾರ್ಚ್, 2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಲೋಇ 27 ಸಿಆರ್‌ಎಂ 2013, ದಿನಾಂಕ: 31–01–2013ರನ್ನು ಮುಂದುವರೆಸುತ್ತಾ, ಕೊಪ್ಪಳ ನಗರದ ಮಧ್ಯ ಭಾಗದಲ್ಲಿ ಹಾಯ್ದುಹೋಗುವ ರಸ್ತೆಯು ರಾಷ್ಟ್ರೀಯ ಹೆದ್ದಾರಿ–63ರಲ್ಲಿ ಬಿಟ್ಟುಹೋಗಿರುವ ಭಾಗಗಳನ್ನು ಅಭಿವೃದ್ಧಿ ಪಡಿಸಲು ಹಾಗೂ 5 ವೃತ್ತಗಳನ್ನು (ಬಸವೇಶ್ವರ ವೃತ್ತ, ಭೀಮರಾಯ ವೃತ್ತ, ಕನಕದಾಸ ವೃತ್ತ, ಅಶೋಕ ವೃತ್ತ ಹಾಗೂ ಶಾಸ್ತ್ರಿ ವೃತ್ತ) ರೂ. 1738.00 ಲಕ್ಷಗಳ (ಒಂದು ಸಾವಿರದ ಏಳುನೂರ ಮೂವತ್ತೆಂಟು ಲಕ್ಷಗಳು) ಅಂದಾಜು ವೆಚ್ಚದಲ್ಲಿ ಅಂದಾಜು ಮೊತ್ತದ ಮೂರನೇ ಒಂದು ಭಾಗವಾದ ರೂ. 579 ಲಕ್ಷಗಳ (ಐದುನೂರ ಎಪ್ಪತ್ತೊಂಭತ್ತು ಲಕ್ಷಗಳು) ಅನುದಾನವನ್ನು ಒದಗಿಸುವುದರೊಂದಿಗೆ 2012–13ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಸೇರ್ಪಡಿಸಿ ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಮೇಲಿನ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಕೈಗೊಳ್ಳತಕ್ಕದ್ದು ಮತ್ತು ಕಾಮಗಾರಿಗಳ ವೆಚ್ಚವು ಯಾವುದೇ ಕಾರಣಕ್ಕಾಗಿ ಅನುಮೋದಿತ ಅಂದಾಜು ಮೊತ್ತವನ್ನು ಮೀರತಕ್ಕದ್ದಲ್ಲ.

3. ಈ ಆದೇಶವು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ 17ನೇ ನಿಯಮದ (2)ನೇ ಉಪ ನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಆರ್. ರೇವಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

P.R. 592

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆಗೆ 2012–13ನೇ ಸಾಲಿಗೆ ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:
1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, (ಆಜೀವಿಕಾ) ನವದೆಹಲಿ ಇವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎಫ್‌ಟಿಎಸ್ 25869/ಎಲ್–13022/1/2012–ಆರ್.ಎಲ್. ದಿನಾಂಕ: 11–02–2013
2. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ (ಎನ್‌ಆರ್‌ಎಲ್‌ಎಂ) ನವದೆಹಲಿ ಇವರ ಪತ್ರ ಸಂಖ್ಯೆ: 13022/1/2012 (ಎಫ್‌ಟಿಎಸ್–25869)–ದಿನಾಂಕ: 19–03–2013
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಬೆಂಗಳೂರು ಇವರ ಟಿಪ್ಪಣಿ ಸಂಖ್ಯೆ: ದಿನಾಂಕ: 27–03–2013ರಂದು ನೀಡಿರುವ ಅನುಮೋದನೆ

ಪ್ರಸ್ತಾವನೆ:

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್‌ರಚಿಸಿ ಆಜೀವಿಕಾ (ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಮಿಷನ್ (ಎನ್‌ಆರ್‌ಎಲ್‌ಎಂ)) ಜಾರಿಗೆ ತರಲಾಗಿದೆ. ಇದರಂತೆ, ರಾಜ್ಯ ಸರ್ಕಾರವು, ಎನ್‌ಆರ್‌ಎಲ್‌ಎಂ ಯೋಜನೆಯನ್ನು ರಾಜ್ಯಾದ್ಯಂತ ಹಂತ ಹಂತವಾಗಿ ಅನುಷ್ಠಾನಗೊಳಿಸಲು ತೀಮಾನಿಸಿದೆ. ಈ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸೊಸೈಟಿ (ಕರ್ನಾಟಕ ಸ್ಟೇಟ್ ರೂರಲ್ ಲೈವ್ಲಿಹುಡ್ ಪ್ರಮೋಷನ್ ಸೊಸೈಟಿ (ಕೆಎಸ್‌ಆರ್‌ಎಲ್‌ಪಿಎಸ್) ಸ್ಥಾಪಿಸಲಾಗಿದೆ. "ಅಜೀವಿಕಾ" (ಎನ್‌ಆರ್‌ಎಲ್‌ಎಂ) ಯೋಜನೆಯನ್ನು ರಾಜ್ಯದಲ್ಲಿ "ಸಂಜೀವಿನಿ" ಹೆಸರಿನಲ್ಲಿ ಅನುಷ್ಠಾನಗೊಳಿಸಲಾಗುವುದು. ಪ್ರಥಮ ಹಂತದಲ್ಲಿ ರಾಜ್ಯದ 5 ಜಿಲ್ಲೆಗಳ (ಬೆಳಗಾಂ, ಧಾರವಾಡ, ಗುಲ್ಬರ್ಗಾ, ಮೈಸೂರು ಮತ್ತು ತುಮಕೂರು) 20 ತಾಲ್ಲೂಕು (ಬ್ಲಾಕ್)ಗಳನ್ನು ಆಯ್ದೆ ಮಾಡಿಕೊಂಡು ಅನುಷ್ಠಾನಗೊಳಿಸಲಾಗುವುದು.

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸೊಸೈಟಿಯಿಂದ ಅನುಷ್ಟಾನಗೊಳಿಸುತ್ತಿರುವ "ಸಂಜೀವಿನಿ" (ಆಜೀವಿಕಾ (ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಮಿಷನ್ (ಎನ್‌ಆರ್‌ಎಲ್‌ಎಂ)) ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಯೋಜನೆಯ ಮಾರ್ಗಸೂಚಿಯಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು 75:25ರ ಅನುಪಾತದಲ್ಲಿ ಭರಿಸಬೇಕಾಗಿದೆ.

ಓದಲಾಗಿದೆ (1)ರ ಅಧಿಕೃತ ಜ್ಞಾಪನದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಕಾರಯುಕ್ತ ಸಮಿತಿಯು (Empowered Committee) ದಿನಾಂಕ: 23–01–2013ರಂದು ನಡೆಸಿದ ಸಭೆಯಲ್ಲಿ 2012–13ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಗ್ರಾಮೀನ ಜೀವನೋಪಾಯ ಸಂವರ್ಧನಾ

ಸೊಸೈಟಿಯು ಸಲ್ಲಿಸಿದ ವಾರ್ಷಿಕ ಕ್ರಿಯಾ ಯೋಜನೆ (ಎಎಪಿ) ಯಲ್ಲಿ ಪ್ರಸ್ತಾಪಿಸಿರುವ ವಿವಿಧ ಚಟುವಟಿಕೆಗಳ ಒಟ್ಟು ರೂ. 208.71 ಲಕ್ಷಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ. 156.63 ಲಕ್ಷ ಮತ್ತು ರಾಜ್ಯ ಸರ್ಕಾರದ ಪಾಲು ರೂ. 52.18 ಲಕ್ಷಗಳಾಗಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಓದಲಾಗಿದೆ (2)ರ ಪತ್ರದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸೊಸೈಟಿಗೆ ತನ್ನ ಪಾಲಿನ ಪ್ರಥಮ ಕಂತಿನ ಅನುದಾನವಾಗಿ ರೂ. 78.27 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಅನುದಾನ ಬಿಡುಗಡೆಯಾದ ಒಂದು ತಿಂಗಳೊಳಗೆ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸೂಚಿಸಿದೆ. ಇದರಂತೆ, ರಾಜ್ಯ ಸರ್ಕಾರವು ಕೇಂದ್ರ ಬಿಡುಗಡೆ ಮಾಡಿದ ಅನುದಾನಕ್ಕನುಗುಣವಾಗಿ ತನ್ನ ಪಾಲಿನ ಅನುದಾನ (ಶೇ. 25) ರೂ. 26.09 ಲಕ್ಷಗಳನ್ನು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸೊಸೈಟಿಗೆ ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 23 ಎಸ್‌ಜೆವೈ 2013, ಬೆಂಗಳೂರು, ದಿನಾಂಕ: 28ನೇ ಮಾರ್ಚ್, 2013

ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸೊಸೈಟಿ (ಕೆಎಸ್‌ಆರ್‌ಎಲ್‌ಪಿಎಸ್) ವತಿಯಿಂದ "ಸಂಜೀವಿನಿ) ಯೋಜನೆಯನ್ನು ಅನುಷ್ಠಾನಗೊಳಿಸಲು 2012-13ನೇ ಸಾಲಿಗೆ ರಾಜ್ಯದ ಪಾಲಿನ ಅನುದಾನ ರೂ. 26.09 ಲಕ್ಷಗಳನ್ನು (ಇಪ್ಪತ್ತಾರು ಲಕ್ಷದ ಒಂಭತ್ತು ಸಾವಿರ ರೂ. ಮಾತ್ರ) ಕೆಎಸ್‌ಆರ್‌ಎಲ್‌ಪಿಎಸ್‌ಗೆ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು :

1. ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198 ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6 ಗ್ರಾಮ ಪಂಚಾಯತ್‌ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ [ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಪ್ರಾಜೆಕ್ಟ್ ಎನ್‌ಆರ್‌ಎಲ್‌ಎಂ)] 2012-2013 ಲಿಂಕ್ ಕೋಡ್ 2501-01-198-6-01 " (ಹೊಸ ಕೋಡ್ 2501-00-101-0-05) ರಡಿ ಸಂಜೀವಿನಿ (ಎನ್‌ಆರ್‌ಎಲ್‌ಎಂ) ಅನುಷ್ಠಾನಕ್ಕಾಗಿ ಭರಿಸುವುದು.
2. **ಮಿಷನ್ ಡೈರೆಕ್ಟರ್, ಕೆಆರ್‌ಎಲ್‌ಪಿಎಸ್, ಬೆಂಗಳೂರು ಇವರು ರುಜು ಮಾಡಿದ ಸ್ವೀಕೃತ ರಸೀದಿ (payees receipt) ಯನ್ನು ಸರ್ಕಾರಕ್ಕೆ ಸಲ್ಲಿಸುವುದು. ನಂತರ ಸ್ವೀಕೃತ ರಸೀದಿ (payees receipt) ಗೆ ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಮೇಲುರುಜು ಮಾಡುವುದು. ಉಪ ನಿರ್ದೇಶಕರು (ಸ್ವಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಅನುದಾನವನ್ನು ಸೆಳೆಯಲು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು. ಅನುದಾನದ ಚೆಕ್ ಬಂದ ನಂತರ ಮಿಷನ್ ಡೈರೆಕ್ಟರ್, ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಇವರಿಗೆ ನೀಡಿ ಸ್ವೀಕೃತಿ ಪಡೆಯುವುದು.**
3. ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿಯಿಂದ ಅನುಮೋದಿತವಾಗಿರುವ ಕೆ.ಎಸ್.ಆರ್.ಎಲ್.ಪಿ.ಎಸ್. ಸಂಸ್ಥೆಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿನ ಚಟುವಟಿಕೆಗಳಿಗೆ ಮಾತ್ರ ಅನುದಾನವನ್ನು ಉಪಯೋಗಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ, ವೆಚ್ಚ-6 ಟಿಪ್ಪಣಿ ಸಂಖ್ಯೆ: ಆಇ 213 ವೆಚ್ಚ 6/2013, ದಿನಾಂಕ: 27-03-2013ರ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ದೀಪ,

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

P.R. 593

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ರಾಜ್ಯದಲ್ಲಿ 'ಆರೋಗ್ಯ ಮಾಹಿತಿ ಸಹಾಯವಾಣಿ' (ಹೆಚ್.ಐ.ಹೆಚ್.ಎಲ್) ಯೋಜನೆಯನ್ನು ಹೆಲ್ತ್ ಮಾನ್ಯೇಜ್‌ಮೆಂಟ್ ಮತ್ತು ರಿಸರ್ಚ್ ಇನ್ಸ್‌ಟಿಟ್ಯೂಟ್ ಆಫ್ ಹೈದರಬಾದ್ (ಹೆಚ್.ಎಂ.ಆರ್.ಐ.) ರವರ ಮೂಲಕ ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂ. ಆಕುಕ 103 ಸಿಜಿಇ 2011, ದಿನಾಂಕ : 20-06-2012.
2. ಸರ್ಕಾರದ ಆದೇಶ ಸಂ. ಆಕುಕ 103 ಸಿಜಿಇ 2011, ದಿನಾಂಕ : 18-01-2013
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರ ಪತ್ರ ಸಂಖ್ಯೆ : ಡಿಡಿ-ಇಎಂಆರ್‌ಐ/36/2012, ದಿನಾಂಕ : 04-02-2013.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಕುಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 06-01-2013 ರಂದು ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಕರ್ನಾಟಕ ರಾಜ್ಯವು ಸಾರ್ವಜನಿಕರಿಗೆ ಸಮಗ್ರವಾಗಿ ಚಿಕಿತ್ಸಾತ್ಮಕ ಉತ್ತೇಜನ ಹಾಗೂ ಪುನರ್ ವಸತಿ ಆರೋಗ್ಯ ಸೇವೆಗಳನ್ನು ಒದಗಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ವಿವಿಧ ಆರೋಗ್ಯ ಕೇಂದ್ರಗಳು/ಆಸ್ಪತ್ರೆಗಳನ್ನು ಸ್ಥಾಪಿಸಿದೆ. ಇವುಗಳ ಮೂಲಕ ಇಲಾಖೆಯು ಆರೋಗ್ಯ ಸೇವೆಗಳನ್ನು ಒದಗಿಸುವ ಜೊತೆಗೆ ಅನೇಕ ರಾಷ್ಟ್ರೀಯ ಮತ್ತು ರಾಜ್ಯದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ 2310 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದರೂ ಸಹ ಈ ಆರೋಗ್ಯ ಕೇಂದ್ರಗಳ ಪ್ರದೇಶದ ವ್ಯಾಪ್ತಿಯ ಹೊರಗೆ ರಾಜ್ಯದ ಬಹುಪಾಲು ಜನತೆಯು ವಾಸಿಸುತ್ತಿದೆ. ಇವರುಗಳಿಗೆ ಅಧಿಕೃತವಾದ ವೈದ್ಯಕೀಯ ಸೌಲಭ್ಯಗಳು ದೊರೆಯುತ್ತಿಲ್ಲವಾದ ಕಾರಣ ಹೆಚ್ಚಿನ ಜನರು ನಕಲಿ ವೈದ್ಯರ

ಸಹಾಯಪಡೆದು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಗ್ರಾಮೀಣ ಹಾಗೂ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಜನ ಸಮುದಾಯಗಳಿಗೆ ಆರೋಗ್ಯ ಸೇವೆಯನ್ನು ತಲುಪುವಂತೆ ಮಾಡುವುದು ಅವಶ್ಯಕವಾಗಿದೆ. ಇಂತಹ ಸನ್ನಿವೇಶದಲ್ಲಿ ಈ ಬಾಧಿತ ಜನತೆಗೆ ವೈದ್ಯಕೀಯ ಚಿಕಿತ್ಸೆ ನೀಡುವುದು ಅವಶ್ಯಕವಾಗಿದ್ದು. ಈ ಸೌಲಭ್ಯವನ್ನು ನೀಡಲು ಅತಿ ಸುಲಭವಾದ ಮಾಧ್ಯಮವಾದ ದೂರವಾಣಿ ಮುಖಾಂತರ ಒದಗಿಸಲು ಸರ್ಕಾರವು ಮನಗೊಂಡು ಸಚಿವ ಸಂಪುಟದ ಅನುಮೋದನೆ ಪಡೆದು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ : 20-06-2012 ರಲ್ಲಿ ರಾಜ್ಯದಲ್ಲಿ 'ಆರೋಗ್ಯ ಮಾಹಿತಿ ಸಹಾಯವಾಣಿ' (ಹೆಚ್.ಐ.ಹೆಚ್.ಎಲ್) ಎಂಬ ಹೊಸ ಯೋಜನೆಯನ್ನು ಜಾರಿಗೆ ತರಲು ಮಂಜೂರಾತಿ ನೀಡಿ ಪ್ರಾರಂಭಿಕವಾಗಿ 100 ಸೀಟುಗಳ ಈ ಆರೋಗ್ಯ ಮಾಹಿತಿ ಸಹಾಯವಾಣಿ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಆದೇಶಿಸಲಾಗಿತ್ತು.

ಆದರೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಐಟಿ ಪಾರ್ಕ್‌ಗಳ ಒತ್ತಡದಿಂದ ಆರೋಗ್ಯ ಮಾಹಿತಿ ಸಹಾಯವಾಣಿ ಕೇಂದ್ರಕ್ಕೆ ಸಾಕಾಗುವಷ್ಟು ಸ್ಥಳಾವಕಾಶ ಪಡೆಯಲು ಕಷ್ಟಕರವಾಗಿರುವುದರಿಂದ, ಹಾಗೂ ಪ್ರಸ್ತುತ ಹುಬ್ಬಳ್ಳಿ ನಗರದಲ್ಲಿ ಸಾಕಷ್ಟು ಸ್ಥಳಾವಕಾಶ ಲಭ್ಯವಿರುವುದನ್ನು ಹಾಗೂ ರಾಜ್ಯದ ಆ ಭಾಗದಲ್ಲಿ ಐಟಿ ಪಾರ್ಕ್‌ಗಳ ಅಭಿವೃದ್ಧಿಪಡಿಸಲು ಅವಕಾಶ ಒದಗಿಸುವುದನ್ನು ಮನಗೊಂಡ ಸರ್ಕಾರವು ಆರೋಗ್ಯ ಮಾಹಿತಿ ಸಹಾಯವಾಣಿ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ಬದಲಾಗಿ ಧಾರವಾಡ ಜಿಲ್ಲೆಯಲ್ಲಿನ ಹುಬ್ಬಳ್ಳಿಯಲ್ಲಿ ಸ್ಥಾಪಿಸಲು ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರಿ ಆದೇಶ ದಿನಾಂಕ : 18-01-2013ರಲ್ಲಿ ಮಂಜೂರಾತಿ ನೀಡಲಾಗಿದೆ.

ಈ ಮಾಹಿತಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ಅದರಡಿ ರಚಿತವಾದ ನಿಯಮಗಳನ್ನು ಅನುಸರಿಸಿ ಕ್ರಮ ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕ್ರಮ ವಹಿಸುವಂತೆ ತಿಳಿಸಲಾಗಿತ್ತು. ಅದರಂತೆ ರಾಜ್ಯದಲ್ಲಿ ಆರೋಗ್ಯ ಮಾಹಿತಿ ಸಹಾಯವಾಣಿಯನ್ನು ಸ್ಥಾಪಿಸಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಆಸಕ್ತ ಸಂಸ್ಥೆಗಳಿಂದ ಅರ್ಜಿಯನ್ನು ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಿದ ಅನ್ವಯ 25 ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸಿದ್ದರು. ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ದಾಖಲೆಗಳನ್ನು ಒಳಗೊಂಡ ಅರ್ಜಿಗಳನ್ನು EOI ಯಲ್ಲಿ ವಿಧಿಸಿದ ಷರತ್ತುಗಳ ಅನ್ವಯ ಪರಿಶಿಲಿಸಿದಾಗ ಹೈದರಾಬಾದಿನ ಹೆಚ್.ಎಂ.ಆರ್.ಐ ಮತ್ತು ಇ.ಎಂ.ಆರ್.ಐ ಸಂಸ್ಥೆಗಳು ಮಾತ್ರ ಎಲ್ಲಾ ಷರತ್ತುಗಳನ್ನು ಪೂರೈಸಿರುವುದರಿಂದ ಈ ಎರಡು ಸಂಸ್ಥೆಗಳನ್ನು RFI ಗೆ ಪರಿಗಣಿಸಬಹುದೆಂದು ಸಮಿತಿಯು ತೀರ್ಮಾನಿಸಿದೆ ಎಂದು ಮೇಲೆ ಓದಲಾದ ಕ್ರಮಾಂಕ (3)ರ ಪ್ರಸ್ತಾವನೆಯಲ್ಲಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ತಿಳಿಸಿದ್ದಾರೆ.

ಮುಂದುವರೆದು IDECK ಸಂಸ್ಥೆಯ ತಾಂತ್ರಿಕ ಮಾರ್ಗದರ್ಶನದೊಂದಿಗೆ ಪಾರದರ್ಶಕತೆ ಹಿನ್ನೆಲೆಯಲ್ಲಿ ಇ-ಟೆಂಡರ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಕರೆದು, ಪ್ರಿ-ಬಿಡ್ ಮೀಟಿಂಗ್ ನಡೆಸಿ ಆಕ್ಷೇಪಣೆಗಳನ್ನು ಸರಿಪಡಿಸಲಾಗಿದೆ. ದಿನಾಂಕ : 23-01-2013 ರಂದು ಟೆಂಡರ್ ಪರಿಶೀಲನಾ ಸಮಿತಿಯು ಪ್ರಸ್ತಾವನೆಯನ್ನು ತೆರೆದಾಗ ಹೆಚ್.ಎಂ.ಆರ್.ಐ. ಸಂಸ್ಥೆ ಹೈದರಬಾದ್ ಇವರು ಮಾತ್ರ ಪ್ರಸ್ತಾವನೆ ಸಲ್ಲಿಸಿದ್ದು. ತಾಂತ್ರಿಕ ಪರಿಶೀಲನೆ ನಡೆಸಿ ಆರ್ಥಿಕ ಪ್ರಸ್ತಾವನೆಯನ್ನು ತೆರೆಯಲಾಯಿತು. ಇದರಲ್ಲಿ ಸದರಿ ಸಂಸ್ಥೆಯು ಸಲ್ಲಿಸಿದ ದರವನ್ನು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯಲ್ಲಿ ಚರ್ಚಿಸಿ ಪುನರ್ ಪರಿಶೀಲಿಸಿದಾಗ ಒಂದು ಸ್ಥಾನಕ್ಕೆ ತ್ರೈಮಾಸಿಕ ರೂ. 1,83,056 ಗಳಿಗೆ ಸಂಸ್ಥೆಯು ಒಪ್ಪಿರುತ್ತದೆ. ಸದರಿ ಸಂಸ್ಥೆಯು ಸಲ್ಲಿಸಿದ ದರಗಳನ್ನು IDECK ಸಂಸ್ಥೆಯು ಇತರ ರಾಜ್ಯಗಳ ದರ ಪಟ್ಟಿಯೊಂದಿಗೆ ತುಲನಾತ್ಮಕವಾಗಿ ಪರಿಶೀಲಿಸಿ. ಈ ಸಂಸ್ಥೆಯು ಸಲ್ಲಿಸಿದ ದರ ಪಟ್ಟಿಯು ಇತರ ರಾಜ್ಯಗಳ ದರಗಳಿಗೆ ಹೋಲಿಕೆಯಾಗುವುದರಿಂದ ಸದರಿ ಸಂಸ್ಥೆಯನ್ನು ಯಶಸ್ವಿ ಬಿಡ್ಡು ದಾರರೆಂದು ಸಮಿತಿ ತೀರ್ಮಾನಿಸಿದೆ ಎಂದು ತಿಳಿಸಿ ಹೆಚ್.ಎಂ.ಆರ್.ಐ. ಹೈದರಬಾದ್ ಸಂಸ್ಥೆಯು ಸಲ್ಲಿಸಿದ ಟೆಂಡರ್ ಅಂಗೀಕೃತವಾಗಿರುವುದರಿಂದ, ಪ್ರತಿ ಒಂದು ಸ್ಥಾನಕ್ಕೆ ತೆರಿಗೆ ಸಹಿತ ಮಾಸಿಕ ದರ ರೂ. 61,108 ರಂತೆ ತ್ರೈಮಾಸಿಕ ದರ ರೂ. 1,83,056 ನಂತೆ 100 ಸ್ಥಾನಕ್ಕೆ ವಾರ್ಷಿಕ ರೂ. 7,32,22,400/- ವೆಚ್ಚ ಉಂಟಾಗುತ್ತದೆ ಎಂದು ತಿಳಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆಯುಕ್ತರು ಸಲ್ಲಿಸಿದ ಪ್ರಸ್ತಾವನೆಯ ಕುರಿತು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಹೆಚ್.ಎಂ.ಆರ್.ಐ. ಅಧಿಕಾರಿಗಳ ಜೊತೆಯಲ್ಲಿ ದಿನಾಂಕ : 05-02-2013 ರಂದು ಕೂಲಂಕಷವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಹೆಚ್.ಎಂ.ಆರ್.ಐ. ಯವರು ಸಲ್ಲಿಸಿದ ದರ ಪಟ್ಟಿಯನ್ನು 104 ಆರೋಗ್ಯ ಸಹಾಯವಾಣಿ ಜಾರಿಯಲ್ಲಿರುವ ಇತರ ರಾಜ್ಯಗಳ ದರ ಪಟ್ಟಿಯೊಂದಿಗೆ ಹೋಲಿಕೆ ಮಾಡಿ ಕಡಿಮೆ ಇರುವುದನ್ನು ಖಚಿತ ಪಡಿಸಿಕೊಂಡು ಮತ್ತೊಂದು ಸಾರಿ ವ್ಯವಹರಿಸಿ ಅಂತಿಮವಾಗಿ ಪ್ರತಿ ಸೀಟಿಗೆ ತಿಂಗಳಿಗೆ ಎಲ್ಲಾ ತೆರಿಗೆಯನ್ನು ಸೇರಿಸಿ ರೂ. 53100 ಎಂದು ನಿಗಧಿ ಪಡಿಸಿರುವುದನ್ನು ಸಂಸ್ಥೆಯವರು ಒಪ್ಪಿರುತ್ತಾರೆ. ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲು ಪ್ರಾರಂಭಿಕ ಬಂಡವಾಳ ವೆಚ್ಚಕ್ಕೆ ಶೇ. 100 ರಷ್ಟು ಅನಾವರ್ತಕ ವೆಚ್ಚವನ್ನು ಹಾಗೂ ಶೇ. 50 ರಷ್ಟು ಅವರ್ತಕ ವೆಚ್ಚವನ್ನು ಮುಂಗಡವಾಗಿ ನೀಡಲು ತೀರ್ಮಾನಿಸಿ, ಈ ಯೋಜನೆಯನ್ನು ಮಾರ್ಚ್ ತಿಂಗಳೊಳಗಾಗಿ ಪ್ರಾರಂಭಿಸಲು ತಿಳಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಆರ್.ಎಫ್.ಪಿ. ದಾಖಲೆಗಳ ಆಧಾರದ ಮೇಲೆ ಕರಾರು ಪತ್ರವನ್ನು ತಯಾರಿಸುವಂತೆ ಸೂಚಿಸುವ ಕುರಿತು ಕ್ರಮಾಂಕ (4)ರಲ್ಲಿ ಓದಲಾದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಅದರಂತೆ ಕೆಳಕಂಡ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಆಕುಕ 103 ಸಿಜಿಇ 2011, ಬೆಂಗಳೂರು, ದಿನಾಂಕ : 26-02-2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಕರ್ನಾಟಕ ರಾಜ್ಯದಲ್ಲಿ 'ಆರೋಗ್ಯ ಮಾಹಿತಿ ಸಹಾಯವಾಣಿ-104' ಎಂಬ ಹೊಸ ಯೋಜನೆಯನ್ನು ಹೆಲ್ತ್ ಮಾನ್ಯೇಜ್‌ಮೆಂಟ್ ಮತ್ತು ರಿಸರ್ಚ್ ಇನ್ಸ್‌ಟಿಟ್ಯೂಟ್ ಆಫ್ ಹೈದರಬಾದ್ (ಹೆಚ್.ಎಂ.ಆರ್.ಐ) ಸಂಸ್ಥೆಯ ಮೂಲಕ ಸ್ಥಾಪಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಈ ಯೋಜನೆಯನ್ನು ಜಾರಿಗೊಳಿಸಲು ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.

1. ಹೆಚ್.ಎಂ.ಆರ್.ಐ. ಸಂಸ್ಥೆ ಹೈದರಬಾದ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರ ಇವರುಗಳು ಆರ್.ಎಫ್.ಪಿ. ದಾಸ್ತಾವೇಜನ್ನು ಆಧಾರಿಸಿ ತಯಾರಿಸಿದ ಒಡಂಬಡಿಕೆಕ್ಕೆ ಸಹಿ ಮಾಡುವುದು. ಹೆಚ್.ಎಂ.ಆರ್.ಐ. ಸಂಸ್ಥೆ, ಹೈದರಬಾದ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ. ಇವರುಗಳು ಸದರಿ ಒಡಂಬಡಿಕೆಯನ್ನು ಕಟ್ಟು ನಿಟ್ಟಾಗಿ ಪಾಲಿಸಿ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸತಕ್ಕದ್ದು.
2. ಆರೋಗ್ಯ ಮಾಹಿತಿ ಸಹಾಯವಾಣಿಯ ಒಂದು ಸ್ಥಾನಕ್ಕೆ ಪ್ರತಿ ತಿಂಗಳಿಗೆ ಎಲ್ಲಾ ತೆರಿಗೆ ದರಗಳನ್ನು ಒಳಗೊಂಡಂತೆ ರೂ. 53.100 (ಐವತ್ತಾಮೂರು ಸಾವಿರದ ಒಂದು ನೂರು ಮಾತ್ರ) ರಂತೆ ನಿಗಧಿಪಡಿಸಿದೆ. ನಂತರ ಅನುಬಂಧದಲ್ಲಿನ break up ದರಕ್ಕೆ ಅನುಗುಣವಾಗಿ ನಿಗಧಿ ಪಡಿಸುವುದು.

3. ಪ್ರಾರಂಭಿಕವಾಗಿ 100 ಸೀಟುಗಳ ಆರೋಗ್ಯ ಮಾಹಿತಿ ಸಹಾಯವಾಣಿ ಕೇಂದ್ರವನ್ನು ಹುಬ್ಬಳ್ಳಿಯ ಐ.ಟಿ. ಪಾರ್ಕ್‌ನಲ್ಲಿ ಸ್ಥಾಪಿಸುವುದು.
4. ಸಹಾಯವಾಣಿ ಕೇಂದ್ರಕ್ಕೆ ದೂರವಾಣಿ ಕರೆ ಮಾಡಿದ ವ್ಯಕ್ತಿಯ ಆರೋಗ್ಯ ಪರಿಸ್ಥಿತಿಯನ್ನು ತಿಳಿದುಕೊಂಡು ಪ್ರಕರಣವನ್ನು ಅತಿ ಗಂಭೀರ, ಅಥವಾ ಸುಧಾರಿತ ಎಂಬುದಾಗಿ ವಿಂಗಡಿಸಿದ ನಂತರ ನುರಿತ ವೈದ್ಯಕೀಯ ಪರಿಣತರಿಂದ ಅಧಿಕೃತವಾದ ವೈದ್ಯಕೀಯ ಸಲಹೆಯನ್ನು ನೀಡುವುದು.
5. ವೈದ್ಯಕೀಯ ಸಲಹೆ ಸೇವೆಯಡಿ ತರಬೇತಿ ಪಡೆದ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬಹುದು.
6. ಹೆಚ್.ಎಂ.ಆರ್.ಐ. ಸಂಸ್ಥೆಯು ಈ ಸಹಾಯವಾಣಿಗೆ ಬೇಕಾದ ಜನಶಕ್ತಿಯನ್ನು ಒದಗಿಸಿ ಸಿಬ್ಬಂದಿಗೆ ಬೇಕಾದ ತರಬೇತಿಯನ್ನು ನೀಡುವ ಮೂಲಕ ಪರಿಣಾಮಕಾರಿಯಾಗಿ ಈ ಆರೋಗ್ಯ ಸಹಾಯವಾಣಿ ಮಾಹಿತಿಯನ್ನು ಜನತೆಗೆ ಒದಗಿಸುವುದು.
7. ಈ ಆರೋಗ್ಯ ಸಹಾಯವಾಣಿ ಮಾಹಿತಿ ಕೇಂದ್ರಕ್ಕೆ ನೇಮಕ ಮಾಡಿಕೊಳ್ಳುವ ಅವಶ್ಯಕ ಸಿಬ್ಬಂದಿಗೆ ನಿಯಮಾನುಸಾರ ವೇತನ ಮತ್ತು ಭತ್ಯೆಗಳನ್ನು ಹೆಚ್.ಎಂ.ಆರ್.ಐ. ಸಂಸ್ಥೆಯೇ ನಿವಾರಿಸುವುದು.
8. ಸರ್ಕಾರದ ಆದೇಶ ಸಂಖ್ಯೆ : ಆಕುಕ 103 ಸಿಜಿಇ 2011, ದಿನಾಂಕ : 20–06–2011ರಲ್ಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
9. ಹೆಚ್.ಎಂ.ಆರ್.ಐ. ಸಂಸ್ಥೆಯವರು ನಮೂದಿಸಿರುವ ದರಕ್ಕೆ 100 : ರಷ್ಟು ಅನಾವರ್ತಕ ವೆಚ್ಚಗಳ ಮುಂಗಡವನ್ನು ಪ್ರಾರಂಭಿಕ ಬಂಡವಾಳ ವೆಚ್ಚಗಳಿಗಾಗಿ ಸದರಿ ಸಂಸ್ಥೆಗೆ ರಾಜ್ಯ ಸರ್ಕಾರವು ಪಾವತಿಸುವುದು.
10. ಅವರ್ತಕ ವೆಚ್ಚದ ಶೇ 50% ರಷ್ಟನ್ನು ಪ್ರತಿ ತ್ರೈಮಾಸಿಕದಲ್ಲಿ ಮುಂಗಡವನ್ನಾಗಿ ಪಾವತಿಸಲು ಹಾಗೂ ಬಾಕಿ ಮೊತ್ತವನ್ನು ಸಂಸ್ಥೆಯು ನಿರ್ವಹಿಸಿರುವ ವಾಸ್ತವಿಕ ವೆಚ್ಚವನ್ನು ಆಧರಿಸಿ ಬಿಡುಗಡೆ ಮಾಡುವುದು.

2012–13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "2210–06–001–0–05" ರ ಅಡಿ ಒದಗಿಸಲಾಗಿರುವ ರೂ. 10 ಕೋಟಿಗಳಲ್ಲಿ ಈ ಕೇಂದ್ರದ ಬಂಡವಾಳ ವೆಚ್ಚ ಮತ್ತು ಅಪರೇಷನಲ್ ವೆಚ್ಚವನ್ನು ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ಮದನ ಗೋಪಾಲ್

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

KARNATAKA 104 HIHL

Sl. No.	RECURRING EXPENDITURE	2012-13	2013-14	2014-15	2015-16
I	**SALARIES (Gross-CTC)**	**(All In INR Lacs)**			
1.	Health helpline call takers-Registration Officers (RO); Health Advisory Officers (HAO), Medical Officers (MO); Counselling Officers (CO)	Nil	415.68	457.248	502.9728
2.	Supervisory, Managerial, Support & administrative Staff	Nil	97.80	107.58	11.34
	Sub Total (1+2)		**513.48**	**564.83**	**621.31**
II	**OVERHEADS**	Nil			
3.	Electricity	Nil	9.00	9.45	9.92
4.	Training & Recruitment Costs	Nil	3.00	3.00	3.00
5.	Travelling & Monitoring Costs	Nil	5.40	5.40	5.40
6.	Staff welfare (tea, water & rewards)	Nil	11.30	11.30	11.30
7.	Communication	Nil	4.15	4.15	4.15
8.	Utilities & Maintenance	Nil	10.56	11.09	11.64
9.	Soltware Maintenance	Nil	3.00	3.00	3.00
10.	Insurance	Nil	3.00	3.00	3.00
11.	Contingencies	Nil	1.20	1.20	1.20
	Sub Total (3+4+11)		**50.61**	**51.59**	**52.62**
III	**MANAGEMENT FEES**	Nil	3.00	3.00	3.00
	Total (I+II+III)	**Nil**	**567.09**	**619.42**	**676.93**

IV	SERVICE TAX (@12.36%)		70.09	76.56	83.67
	Total Recurring expenditure (Grand Total +IV)		**637.19**	**695.98**	**760.60**
V	**NON-RECURRING EXPENDITURE**				
A	IT Related equipment	110.00			
B	Recruitment & Training costs	7.00			
C	Other equipment	20.00			
D	Interiors & furnishing	35.00			
E	Stipend during training period	22.00			
	Total Non-recurring expenditure (A+B+.. E)	**194.00**			
	TOTAL EXPENDITURE	**194.00**	**637.19**	**695.98**	**760.60**

ಎಂ. ಮದನ ಗೋಪಾಲ್
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

FINAL RECURRING PER SEAT SERVICE FEE FOR 104 HIHL

RECURRING EXPENDITURE	**2013-14**	**2014-15**	**2015-16**
PER ANNUM	637.19	695.98	760.60
PER QUARTER	159.30	174.00	190.15
PER MONTH	53.10	58.00	63.38
ALL INCTUSAL SERVICE FEE PER SLA/m Rs)			
PER QUARTER	159296.86	173995.24	190149.73
PER MONTH	53098.95	57998.41	63383.24

ಎಂ. ಮದನ ಗೋಪಾಲ್
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

P.R. 582

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಆರ್‌ಡಿ 27 ಎಲ್‌ಜಿಬಿ 2013, ಬೆಂಗಳೂರು, ದಿನಾಂಕ : 26-03-2013.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 27 ಎಲ್‌ಜಿಬಿ 2013, ದಿನಾಂಕ : 21-02-2013ರ ಆದೇಶ ಭಾಗದಲ್ಲಿ ವಿಧಿಸಿರುವ ನಿಬಂಧನೆಗಳು ವೈ.ಎ.ಎನ್. ಚಾರಿಟಬಲ್ ಟ್ರಸ್ಟ್(ರಿ), ಬೆಂಗಳೂರು ಇವರಿಗೆ ಅನ್ವಯಿಸುವುದೆಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಉಮಾದೇವಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1).

P.R. 583

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ದಿ : ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ ಈ ಕಾರ್ಖಾನೆಗೆ ಬಂಡವಾಳ ಕೆಲಸಗಳ ಹೂಡಿಕೆಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಸಿಐ 58 ಎಸ್‌ಜಿಎಫ್ 2012, ದಿನಾಂಕ: 08–06–2012
2. ಸರ್ಕಾರದ ಆದೇಶ ಸಂಖ್ಯೆ : ಸಿಐ 08 ಎಸ್‌ಜಿಎಫ್ 2011, ದಿನಾಂಕ : 8–10–2012
3. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸಕ್ಕರೆ ಕಾರ್ಖಾನೆ (ನಿ), ಇವರ ಪತ್ರ ಸಂಖ್ಯೆ : MD:DO:BLR:48:2013, ದಿನಾಂಕ : 01–02–2013.
4. ಸರ್ಕಾರದ ಆದೇಶ ಸಂಖ್ಯೆ : ಸಿಐ 58 ಎಸ್‌ಜಿಎಫ್ 2012, ದಿನಾಂಕ : 07–02–2013
5. ಸರ್ಕಾರದ ಆದೇಶ ಸಂಖ್ಯೆ : ಸಿಐ 08 ಎಸ್‌ಜಿಎಫ್ 2011, ದಿನಾಂಕ : 07–02–2013
6. ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ : FD 203 Exp-1/2013, dated : 25-03-2013

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ : 08–06–2012 ರಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ ಈ ಕಾರ್ಖಾನೆಗೆ 2012–13ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ "4860–04–190–1–00 (Plan)-211-Investment for Capital works of MYSUGAR" ಇದರಡಿ ಒದಗಿಸಿರುವ ಅನುದಾನ ರೂ. 3000.00 ಲಕ್ಷಗಳ ಪೈಕಿ ರೂ. 1500.00 ಲಕ್ಷಗಳನ್ನು ಬಂಡವಾಳ ವೆಚ್ಚಕ್ಕಾಗಿ ಬಿಡುಗಡೆ ಮಾಡಲಾಗಿರುತ್ತದೆ. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ : 08–10–2012 ರಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ ಇದರ ಸಹ–ವಿದ್ಯುತ್ ಘಟಕ ಸ್ಥಾಪನೆಗಾಗಿ ಮತ್ತು ಶುಗರ್ಸ್ ಗೋಡೌನ್ ಕಟ್ಟಲು ಹುಡ್ಕೋ ಸಂಸ್ಥೆಯಿಂದ ಪಡೆಯಲಾಗಿದ್ದ ರೂ. 5726.16 ಲಕ್ಷಗಳ ಮರುಪಾವತಿಗೆ ಸಂಬಂಧಿಸಿದಂತೆ ಹುಡ್ಕೋ ಸಂಸ್ಥೆಯ ನೀಡಿರುವ OTS offer ನಂತೆ ದಿನಾಂಕ : 30–06–2012 ಮತ್ತು ದಿನಾಂಕ : 30–09–2012 ರ ಅಂತ್ಯಕ್ಕೆ ಅಸಲು ಮತ್ತು ಬಡ್ಡಿ ಸೇರಿ ಒಟ್ಟು ರೂ. 622.46 ಲಕ್ಷಗಳನ್ನು ಹುಡ್ಕೋ ಸಂಸ್ಥೆಗೆ ಪಾವತಿಸುವ ಸಲುವಾಗಿ ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ (3) ರಲ್ಲಿ ಓದಲಾದ ಪ್ರಸ್ತಾವನೆ ನಿರ್ದೇಶಕರು ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ ಇವರ ದಿನಾಂಕ : 01–02–2013ರ ಪತ್ರದಲ್ಲಿ ಈ ಕೆಳಗಿನಂತೆ ಹಣ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

1.	ಡಿಸೆಂಬರ್ 2012 ರ ಅಂತ್ಯದ ಹುಡ್ಕೋ ಸಾಲ ಮರುಪಾವತಿಗಾಗಿ	ರೂ. 3.08 ಕೋಟಿ
2.	ರೈತರ ಕಬ್ಬು ಬಾಕಿ ಪಾವತಿಗಾಗಿ	ರೂ. 5.70 ಕೋಟಿ
3.	ಮಾರ್ಚ್ 2012 ಅಂತ್ಯದ ಹುಡ್ಕೋ ಸಾಲ ಮರುಪಾವತಿಗಾಗಿ ಪೂರಕ ಅಂದಾಜು III ರಡಿ	ರೂ. 5.00 ಕೋಟಿ
	ಒಟ್ಟು	**ರೂ. 13.78 ಕೋಟಿ**

ಮೇಲೆ (4) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ : 07–02–2013 ರಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ ಈ ಕಾರ್ಖಾನೆಗೆ ಬಂಡವಾಳ ವೆಚ್ಚಕ್ಕಾಗಿ ರೂ. 569.94 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ (5) ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ: 07–02–2013 ರಲ್ಲಿ ಹುಡ್ಕೋ ಸಾಲದ 3ನೇ ಕಂತಿನ (ದಿನಾಂಕ: 30–12–2013ರ ಅಂತ್ಯ) ಮರುಪಾವತಿ ಸಲುವಾಗಿ ರೂ. 307.60 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ (6) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಪೂರಕ ಅಂದಾಜು III (SE-III) ರಲ್ಲಿ ರೂ. 500.00 ಲಕ್ಷಗಳನ್ನು ಒದಗಿಸಿದ್ದು ಈ ಪೈಕಿ ರೂ. 302.87 ಲಕ್ಷಗಳನ್ನು 4ನೇ ಕಂತಿನ ಹುಡ್ಕೋ ಸಾಲ ಮರುಪಾವತಿ ಸಲುವಾಗಿ ಹಾಗೂ ರೂ. 197.13 ಲಕ್ಷಗಳನ್ನು ಮೈಸೂರು ಸಕ್ಕರೆ ಕಾರ್ಖಾನೆಗೆ ಬಂಡವಾಳ ವೆಚ್ಚಕ್ಕಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ. ಹುಡ್ಕೋ ಸಾಲ ಮರುಪಾವತಿಗಾಗಿ ರೂ. 302.87 ಲಕ್ಷಗಳನ್ನು ಬಿಡುಗಡೆಗೊಳಿಸಿ ಪ್ರತ್ಯೇಕ ಆದೇಶವನ್ನು ಹೊರಡಿಸಿದೆ. ಬಂಡವಾಳ ವೆಚ್ಚಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 58 ಎಸ್‌ಜಿಎಫ್ 2012, ಬೆಂಗಳೂರು, ದಿನಾಂಕ : 27–03–2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿಮಿಟೆಡ್, ಮಂಡ್ಯ, ಈ ಕಾರ್ಖಾನೆಗೆ 2012–13ನೇ ಸಾಲಿನ ಪೂರಕ ಅಂದಾಜು–III (SE-III) ಲೆಕ್ಕಶೀರ್ಷಿಕೆ "4860–04–190–1–00–211 Investments Plan" ರ ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ರೂ. 197.13 ಲಕ್ಷಗಳನ್ನು (ನೂರ ತೊಂಭತ್ತೇಳು ಲಕ್ಷ ಹದಿಮೂರು ಸಾವಿರ ರೂಪಾಯಿಗಳು ಮಾತ್ರ) ಬಂಡವಾಳ ವೆಚ್ಚಕ್ಕಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಹಣ ಸೆಳೆಯುವ ಅಧಿಕಾರಿಯು ಸಹಾಯಕ ನಿರ್ದೇಶಕರು (ಹೆಚ್.ಆರ್.ಡಿ. ಆಡಳಿತ ಮತ್ತು ಇ.ಎಂ) ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ, ಆಗಿದ್ದು ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 203 Exp-1/2013, ದಿನಾಂಕ : 25–03–2013 ರಲ್ಲಿ ನೀಡಲಾದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ. ಪರಮೇಶ್ವರಪ್ಪ

ಪೀಠಾಧಿಕಾರಿ (ಸಕ್ಕರೆ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

P.R. 584

ಕಂದಾಯ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕು ತೇರದಾಳ ನಗರದಲ್ಲಿ ಹೊಸದಾಗಿ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಹಾಗೂ ವಿಶೇಷ ತಹಶೀಲ್ದಾರ್ ಕಛೇರಿಯನ್ನು ಪ್ರಾರಂಭ ಮಾಡುವ ಕುರಿತು.

ಓದಲಾಗಿದೆ :

1. ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಸಭೆ ಮತ್ತು ಶಾಸಕರು, ತೇರದಾಳ ಮತಕ್ಷೇತ್ರರವರ ಮನವಿ ದಿನಾಂಕ : 22–1–2009, 15–7–2009 ಮತ್ತು ದಿನಾಂಕ : 13–03–2013.
2. ಆಯುಕ್ತರು, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಇಲಾಖೆರವರ ಪತ್ರ ಸಂಖ್ಯೆ : ಸಿಬ್ಬಂದಿ–2–195/12–13, ದಿನಾಂಕ : 15–03–2013.
3. ತಹಶೀಲ್ದಾರ್, ಜಮಖಂಡಿ ತಾಲ್ಲೂಕುರವರು ಪತ್ರ ಸಂಖ್ಯೆ : ಎಂಎಸ್‌ಸಿ/ಎಸ್/119/2010–11, ದಿನಾಂಕ : 17–07–2010.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತೇರದಾಳ ಪಟ್ಟಣದಲ್ಲಿ ಕಂದಾಯ ಇಲಾಖೆಯ ಕೆಲಸಗಳು ಇತ್ತೀಚೆಗೆ ಹೆಚ್ಚಾಗಿರವುದರಿಂದ ಹಾಗೂ ಸಾರ್ವಜನಿಕರಿಂದ ಅನೇಕ ಮನವಿಗಳು ಸ್ವೀಕೃತವಾಗಿರುವುದರಿಂದ ಆಡಳಿತವನ್ನು ಸುಸೂತ್ರವಾಗಿ ನಿರ್ವಹಿಸಲು ಒಂದು ವಿಶೇಷ ತಹಶೀಲ್ದಾರ್ ಹುದ್ದೆಯುಳ್ಳ ಕಛೇರಿಯನ್ನು ಹಾಗೂ ಇತ್ತೀಚೆಗೆ ನೋಂದಣಿ ದಸ್ತಾವೇಜುಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ತೇರದಾಳ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಸ್ಥಾಪಿಸಲು ಉದ್ದೇಶಿಸಿ, ಈ ಕೆಳಕಂಡಂತೆ ಎರಡು ಕಛೇರಿಗಳನ್ನು ಸಾರ್ವಜನಿಕ ಹಿತದೃಷ್ಠಿಯಿಂದ ಸೃಜಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಂಇ 135 ಎಎಸ್‌ಡಿ 2013, ದಿನಾಂಕ : 20–03–2013

1)ಬಾಗಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕು ತೇರದಾಳ ನಗರದಲ್ಲಿ ವಿಶೇಷ ತಹಶೀಲ್ದಾರ್ ಹುದ್ದೆಯ ಜೊತೆಗೆ ಈ ಕೆಳಕಂಡ ಸಿಬ್ಬಂದಿ ಹುದ್ದೆಗಳೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹೊಸದಾಗಿ ಕಛೇರಿಯನ್ನು ಸೃಜಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1.	ವಿಶೇಷ ತಹಶೀಲ್ದಾರ್ (ಗ್ರೇಡ್–2)	1
2.	ಶಿರಸ್ತೇದಾರ್	1
3.	ದ್ವಿತೀಯ ದರ್ಜೆ ಸಹಾಯಕರು	3
4.	ಗ್ರೂಪ್–ಡಿ	2
	ಒಟ್ಟು	**07**

ಈ ಕಛೇರಿಯನ್ನು ಹಾಲಿ ಇರುವ ಉಪ ತಹಶೀಲ್ದಾರರ ಕಟ್ಟಡದಲ್ಲಿಯೇ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ. ಈ ಕಛೇರಿಯ ಆರಂಭಕ್ಕಾಗಿ, ಸಿಬ್ಬಂದಿಯ ವೇತನ ಮತ್ತು ಪೀಠೋಪಕರಣಗಳಿಗೆ ಸಂಬಂಧಿಸಿದ ವೆಚ್ಚವನ್ನು ಜಿಲ್ಲಾಧಿಕಾರಿಗಳು ತಮ್ಮ ಆಯವ್ಯಯದ ಉಳಿತಾಯದಿಂದ ಭರಿಸತಕ್ಕದ್ದು.

2)ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ತೇರದಾಳ ನಗರದಲ್ಲಿ ನಾಡ ಕಛೇರಿ ಬಾಜುಕೆ ಇರುವ ಸುಸಜ್ಜಿತ ಸರ್ಕಾರಿ ಕಟ್ಟಡದಲ್ಲಿ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಈ ಕೆಳಕಂಡ ಸಿಬ್ಬಂದಿ ಹುದ್ದೆಗಳೊಂದಿಗೆ ತಕ್ಷಣದಿಂದ ಜಾರಿಗೆಬರುವಂತೆ ಹೊಸದಾಗಿ ಸೃಜಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಒಟ್ಟು ಹುದ್ದೆಗಳು
1.	ಉಪನೋಂದಣಾಧಿಕಾರಿಗಳು	01
2.	ಪ್ರಥಮ ದರ್ಜೆ ಸಹಾಯಕರು	01
3.	ದ್ವಿತೀಯ ದರ್ಜೆ ಸಹಾಯಕರು	02
4.	ಕಂಪ್ಯೂಟರ್ ಆಪರೇಟರ್ಸ್	02
5.	ಡಿ–ಗ್ರೂಪ್ ನೌಕರರು	01
	ಒಟ್ಟು	**07**

ಈ 07 ಹುದ್ದೆಗಳಿಗೆ ವಾರ್ಷಿಕವಾಗಿ ತಗಲುವ ವೆಚ್ಚ ರೂ. 11,74,836–00 ಗಳನ್ನು ಭರಿಸಲು, ಆಯುಕ್ತರು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಇಲಾಖೆ, ಬೆಂಗಳೂರುರವರು ಕ್ರಮ ವಹಿಸತಕ್ಕದ್ದು.

3) ಈ ಮೇಲ್ಕಂಡ ಎರಡು ಹೊಸ ಕಛೇರಿಗಳು ತಕ್ಷಣದಿಂದ ಜಾರಿಗೆ ಬರುವಂತೆ ಕಾರ್ಯನಿರ್ವಹಿಸಲು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಮತ್ತು ಆಯುಕ್ತರು, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಇಲಾಖೆರವರು ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು. ಹಾಗೂ ಮಂಜೂರಾದ ಈ ಹುದ್ದೆಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇತರೆ ಕಛೇರಿಗಳಿಂದ Re-deployment ಮೂಲಕ ಅಧಿಕಾರಿಗಳನ್ನು/ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಭರ್ತಿ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : FD 265 Exp-7/2013, ದಿನಾಂಕ : 19–03–2013 ರಲ್ಲಿ ನೀಡಿರುವ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಉಪ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3, ಪುನರ್ವಸತಿ & ಭೂಮಾಪನ).

P.R. 585

SC - 200

ಕಂದಾಯ ಸಚಿವಾಲಯ

ವಿಷಯ : ಮಾಜಿ ಅನುವಂಶಿಕ ಪಟೇಲರುಗಳಿಗೆ ಹಾಲಿ ಕೊಡುತ್ತಿರುವ ಮಾಸಿಕ 1250/– ರೂ.ಗಳ ಬದಲಾಗಿ ರೂ. 1450/– ರೂಗಳನ್ನು ಅನುಕಂಪ ಭತ್ಯೆ ನೀಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಕಂಇ 443 ಎಂವಿಎಸ್ (1)/84, ದಿನಾಂಕ : 20–09–1984.
2. ಸರ್ಕಾರದ ಕಂಇ 286 ಎಂವಿಎಸ್ 91, ದಿನಾಂಕ : 30–05–1994.
3. ಸರ್ಕಾರದ ಆದೇಶ ಸಂಖ್ಯೆ : ಕಂಇ 295 ಎಂವಿಎಸ್ 2006, ದಿನಾಂಕ : 18–02–2009.
4. ಸರ್ಕಾರದ ಆದೇಶ ಸಂಖ್ಯೆ : ಕಂಇ 158 ಎಂವಿಎಸ್ 2010, ದಿನಾಂಕ : 07–06–2012.
5. ಕರ್ನಾಟಕ ರಾಜ್ಯ ಪಟೇಲರುಗಳ ಸಂಘದ ಮನವಿ ದಿನಾಂಕ : 06–11–2012.

ಪ್ರಸ್ತಾವನೆ :

ದಿನಾಂಕ : 01–02–1963 ರಿಂದ ಜಾರಿಗೆ ಬಂದ ಕರ್ನಾಟಕ ಗ್ರಾಮಾಧಿಕಾರಿಗಳ ರದ್ಧತಿ ಕಾಯ್ದೆಯ ಪರಿಣಾಮವಾಗಿ ಅನುವಂಶಿಕ ಹಕ್ಕು ಅಧಿಕಾರ ಕಳೆದುಕೊಂಡ ಮಾಜಿ ಪಟೇಲರುಗಳಿಗೆ ಮಾಸಿಕ 100/– ರೂಪಾಯಿಗಳ ಅನುಕಂಪ ಭತ್ಯೆಯನ್ನು ದಿನಾಂಕ : 01–08–1984 ರಿಂದ ಜಾರಿಗೆ ಬರುವಂತೆ ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಷರತ್ತುಗಳಿಗನುಗುಣವಾಗಿ ಮಂಜೂರು ಮಾಡಲಾಗಿತ್ತು. ನಂತರ ಸರ್ಕಾರದ ಆದೇಶ ಸಂಖ್ಯೆ : ಕಂಇ 286 ಎಂವಿಎಸ್ 1991 ದಿನಾಂಕ : 30–05–1994 ರಲ್ಲಿ ಈ ಅನುಕಂಪ ಭತ್ಯೆಯನ್ನು ರೂ. 100/– ರಿಂದ ರೂ. 500ಕ್ಕೆ ಹೆಚ್ಚಿಸಿ ದಿನಾಂಕ : 01–01–1994 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿರುತ್ತದೆ. ಮುಂದುವರೆದು ಓದಲಾದ ಕ್ರಮಸಂಖ್ಯೆ (3)ರ ಸರ್ಕಾರಿ ಆದೇಶ ಸಂಖ್ಯೆ : ಕಂಇ 295 ಎಂವಿಎಸ್ 2006, ದಿನಾಂಕ : 18–02–2009ರಲ್ಲಿ ಅನುಕಂಪ ಭತ್ಯೆಯನ್ನು ನವೆಂಬರ್ 2008 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರೂ. 500 ರಿಂದ 1000/– ರೂಗಳಂತೆ ಪಾವತಿಸಲು ಆದೇಶಿಸಲಾಗಿರುತ್ತದೆ. ಮುಂದುವರೆದು ಓದಲಾದ ಕ್ರಮಸಂಖ್ಯೆ (4)ರ ಸರ್ಕಾರದ ಆದೇಶ ಸಂಖ್ಯೆ : ಕಂಇ 158 ಎಂವಿಎಸ್ 2010 ದಿನಾಂಕ : 07–06–2012 ರಲ್ಲಿ ಅನುಕಂಪ ಭತ್ಯೆಯನ್ನು 01–05–2012 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರೂ. 1000/– ರಿಂದ ರೂ. 1250/–ಗಳಂತೆ ಪಾವತಿಸಲು ಆದೇಶಿಸಲಾಗಿರುತ್ತದೆ.

ಪ್ರಸ್ತುತ ನೀಡಲಾಗುತ್ತಿರುವ ಅನುಕಂಪ ಭತ್ಯೆ 1250/– ರೂಪಾಯಿಗಳು ಈಗಿನ ದುಭಾರಿ ವೆಚ್ಚದಲ್ಲಿ ಏನೂ ಸಾಕಾಗುವುದಿಲ್ಲ ಹಾಗೂ ಸಾಮಾನ್ಯವಾಗಿ ಎಲ್ಲಾ ಪಟೇಲರುಗಳಿಗೂ 60 ರಿಂದ 70 ವರ್ಷ ವಯಸ್ಸಾಗಿರುವುದರಿಂದ ಹಾಗೂ ಅನೇಕ ಪಟೇಲರು ಅನಾರೋಗ್ಯ ಪೀಡಿತರಾಗಿರುವುದರಿಂದ ಈಗ ಕೊಡುತ್ತಿರುವ ರೂ. 1250/– ಗಳಿಂದ ರೂ. 3000/–ಗಳಿಗೆ ಹೆಚ್ಚಿಸುವಂತೆ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಜಿ ಪಟೇಲರ ಸಂಘ, ಬೆಂಗಳೂರು ಇವರು ದಿನಾಂಕ : 06–01–2012 ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿ ವಿನಂತಿಸಿಕೊಂಡಿದ್ದಾರೆ.

ಈ ಮೇಲ್ಕಂಡ ಕಾರಣಗಳಿಂದ ಮಾನ್ಯ ಮುಖ್ಯಮಂತ್ರಿಯವರು ಈಗ ಕೊಡುತ್ತಿರುವ ಗೌರವ ಧನವನ್ನು 1250/–ರೂಗಳಿಂದ ರೂ. 1450/–ಗಳಿಗೆ ಹೆಚ್ಚಿಸಲು ಆರ್ಥಿಕ ಇಲಾಖೆ ಪ್ರಸ್ತಾವನೆಗೆ ಸಹಮತಿಸಿದೆ. ಈ ಸಂಬಂಧ ತಗಲುವ ಹೆಚ್ಚುವರಿ ವೆಚ್ಚವನ್ನು 2013–14ನೇ ಸಾಲಿನಲ್ಲಿ ಆಡಳಿತ ಇಲಾಖೆಗೆ ಒದಗಿಸಿರುವ ಆಯವ್ಯಯದ ಲಭ್ಯತೆಯ ಮಿತಿಯಲ್ಲಿಯೇ ಭರಿಸುವ ಷರತ್ತಿಗೆ ಒಳಪಟ್ಟು ಒಪ್ಪಲಾಗಿದೆ.

ಈ ಮೇಲಿನ ಆರ್ಥಿಕ ಇಲಾಖೆಯ ಅಭಿಪ್ರಾಯ/ಸಹಮತಿಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಒಟ್ಟು 2517 ಮಾಜಿ ಪಟೇಲರುಗಳಿಗೆ ಈಗ ಕೊಡುತ್ತಿರುವ ಅನುಕಂಪ ಭತ್ಯೆಯನ್ನು ದಿನಾಂಕ : 01–04–2013 ರಿಂದ ಜಾರಿಗೆ ಬರುವಂತೆ ಮಾಹೆಯಾನ ರೂ. 1250/–ಗಳಿಂದ ರೂ. 1450/– ಗಳಿಗೆ ಹೆಚ್ಚಿಸಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 156 ಎಂವಿಎಸ್ 2010, ದಿನಾಂಕ : 19–03–2013

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಹಾಲಿ ಮಾಜಿ ಅನುವಂಶಿಕ ಪಟೇಲರುಗಳಿಗೆ ಈಗ ನೀಡುತ್ತಿರುವ ಮಾಹೆಯಾದ ರೂ. 1250/–ಗಳ ಅನುಕಂಪ ಭತ್ಯೆಯನ್ನು 01–04–2013 ರಿಂದ ಜಾರಿಗೆ ಬರುವಂತೆ ಮಾಹೆಯಾವ ರೂ. 1450/–ರಂತೆ ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2071–01–200–0–06 ರಡಿಯಲ್ಲಿ ಭರಿಸತಕ್ಕದ್ದು.

ಈ ಅಡ್‌ಹಾಕ್ ಭತ್ಯೆಗೆ ತುಟ್ಟಿ ಭತ್ಯೆ ಕೊಡುವುದಿಲ್ಲ. ಈ ಮಾಸಿಕ ಅನುಕಂಪ ಭತ್ಯೆಯನ್ನು ಅನುಕಂಪ ಆಧಾರದ ಮೇಲೆ ಕೊಡಲಾಗಿದ್ದು ಪಿಂಚಣಿ ನಿಯಮಗಳು ಇದಕ್ಕೆ ಅನ್ವಯಿಸುವುದಿಲ್ಲ ಮತ್ತು ಈ ಭತ್ಯೆ ಅನುಕಂಪ ಭತ್ಯೆಯಾಗಿರುವುದರಿಂದ ಇವರ ಕುಟುಂಬದವರು ಯಾವುದೇ ಕುಟುಂಬ ನಿವೃತ್ತಿ ವೇತನಕ್ಕೆ ಅರ್ಹರಿರುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : 56 ವೆಚ್ಚ–7/2013 ದಿನಾಂಕ : 22–02–2013ರನ್ವಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ. ಭಾನುಮತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–ಎ).

P.R. 586

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಎಸ್‌ಜಿಎಸ್‌ವೈಯಡಿ 2012–13ನೇ ಸಾಲಿನಲ್ಲಿ ರಾಜ್ಯದ ಉಡುಪಿ ಜಿಲ್ಲಾ ಪಂಚಾಯತಿಗೆ ರಾಜ್ಯದ ಪಾಲಿನ 1ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನವದೆಹಲಿ ಎಫ್‌ಟಿಎಸ್ ಫೈಲ್ಸ್ ನಂ. 18080/2012 ಸಂಖ್ಯೆ: ಜಿ–20011/2/2012 ಎಸ್‌ಜಿಎಸ್‌ವೈ(1) ದಿನಾಂಕ : 11–04–2012.
2. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನವದೆಹಲಿ ಪತ್ರ ಸಂಖ್ಯೆ : ಜೆ–11060/7/2012 ಎಸ್‌ಜಿಎಸ್‌ವೈ (1) (12) ದಿನಾಂಕ : 01–06–2012.

ಓದಲಾಗಿದೆ :

3. ಕೇಂದ್ರ ಸರ್ಕಾರದ ಅನುದಾನ ಜಮೆ ದಿನಾಂಕ : 18–06–2012.
4. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನವದೆಹಲಿ ಆರ್‌ಎಲ್–ಎಫ್‌ಟಿಎಸ್ 19407, ದಿನಾಂಕ : 05–07–2012.
5. ಆರ್ಥಿಕ ಇಲಾಖೆ (ವೆಚ್ಚ–6), ಬೆಂಗಳೂರು, ಇವರ ಸಂಖ್ಯೆ : ಆಇ 366 ವೆಚ್ಚ–06/2012, ದಿನಾಂಕ : 26–09–2012, 26–11–2012 ಮತ್ತು 15–02–2013.
6. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 24 ಎಸ್‌ಜಿವೈ 2012, ಬೆಂಗಳೂರು, ದಿನಾಂಕ : 10–08–2012.
7. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 43 ಎಸ್‌ಜಿವೈ 2012, ಬೆಂಗಳೂರು, ದಿನಾಂಕ : 15–11–2012, ತಿದ್ದುಪಡಿ ಸಮ ಸಂಖ್ಯೆ ದಿನಾಂಕ : 17–11–2012, ಸರ್ಕಾರದ ಆದೇಶದ ಸಮ ಸಂಖ್ಯೆ ದಿನಾಂಕ : 12–12–2012 ಮತ್ತು 04–03–2013.
8. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನವದೆಹಲಿ ಪತ್ರ ಸಂಖ್ಯೆ : ಜೆ–12022/4/2011 ಎಸ್‌ಜಿಎಸ್‌ವೈ(1) (11) ದಿನಾಂಕ : 03–01–2013.
9. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನವದೆಹಲಿ ಪತ್ರ ಸಂಖ್ಯೆ : ಜೆ–11022/2/2011, ಎಸ್‌ಜಿಎಸ್‌ವೈ–1 (32) ದಿನಾಂಕ : 31–12–2012.
10. ಆರ್ಥಿಕ ಇಲಾಖೆ (ವೆಚ್ಚ–6), ಬೆಂಗಳೂರು, ಇವರ ಸಂಖ್ಯೆ : ಆಇ 366 ವೆಚ್ಚ 6/2012, ದಿನಾಂಕ : 12–03–2013.

ಪ್ರಸ್ತಾವನೆ :

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯು (ಎಸ್‌ಜಿಎಸ್‌ವೈ) ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಯೋಜನೆಯ ಮಾರ್ಗಸೂಚಿಯಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಅನುದಾನವನ್ನು 75 : 25 ರ ಅನುಪಾತದಲ್ಲಿ ಭರಿಸಬೇಕಾಗಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಓದಲಾಗಿದೆ (1)ರಲ್ಲಿ ಎಸ್‌ಜಿಎಸ್‌ವೈ/ಎನ್‌ಆರ್‌ಎಲ್‌ಎಂ ಯೋಜನೆ ಅನುಷ್ಠಾನಕ್ಕಗಿ ರೂ. 1,17,02,67,000/– ಹಂಚಿಕೆ ಮಾಡಿದೆ. ಈ ಪೈಕಿ ಕೇಂದ್ರದ ಪಾಲು ರೂ. 87,77,00,000/– ಹಾಗೂ ರಾಜ್ಯದ ಪಾಲು ರೂ. 29,25,67,000/– ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಓದಲಾಗಿದೆ (2), (4) ಮತ್ತು (8) ರನ್ವಯ ರಾಜ್ಯದ 26 ಜಿಲ್ಲಾ ಪಂಚಾಯತ್‌ಗಳಿಗೆ ರೂ. 39,74,85,000/– ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ರೂ. 13,24,95,000/– ಬಿಡುಗಡೆ ಮಾಡಬೇಕಾಗಿದೆ. ಆದರೆ, 2012–13ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ಎಸ್‌ಜಿಎಸ್‌ವೈ ಯೋಜನೆಯ ಅನುಷ್ಟಾನಕ್ಕಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಲು ಯಾವುದೇ ಅನುದಾನವನ್ನು ಕಾಯ್ದಿರಿಸಿರುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರ 2012–13ನೇ ಸಾಲಿಗೆ ಎಸ್‌ಜಿಎಸ್‌ವೈ ಯೋಜನೆಯ ಬದಲಿಗೆ ಅಜೀವಿಕ (ಎನ್‌ಆರ್‌ಎಲ್‌ಎಂ) ಜಾರಿಗೆ ಬರುವುದಾಗಿ ತಿಳಿಸಿದ್ದರಿಂದ ಪ್ರಧಾನ ಲೆಕ್ಕ ಶೀರ್ಷಿಕೆ "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–198 ಗ್ರಾಮ ಪಂಚಾಯತ್‌ಗಳಿಗೆ ಸಹಾಯ–6 ಗ್ರಾಮ ಪಂಚಾಯತ್‌ಗಳು–01–ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2012–13ನೇ ಲಿಂಕ್ ಕೋಡ್ 2501–01–198–6–01" (ಹೊಸ ಜಿಲ್ಲಾ ಪಂಚಾಯತಿ ಕೋಡ್ 2501–01–101–0–13) ನಲ್ಲಿ 2012–13ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಯಾವುದೇ ಅನುದಾನ ಕಾಯ್ದಿರಿಸಿಕೊಂಡಿರುವುದಿಲ್ಲ. ಆದರ 2012–13ನೇ ಸಾಲಿಗೆ ಎಸ್‌ಜಿಎಸ್‌ವೈ ಅನುಷ್ಠಾರಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯದ 26 ಜಿಲ್ಲಾ ಪಂಚಾಯತ್‌ಗೆ 1ನೇ ಕಂತಿನ ಅನುದಾನ ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಆದ್ದರಿಂದ ಎಸ್‌ಜಿಎಸ್‌ವೈ ಯೋಜನೆ ಬದಲಿಗೆ ಜಾರಿಗೆ ಬಂದಿರುವ ಆಜೀವಿಕ (ಎನ್‌ಅರ್‌ಎಲ್‌ಎಂ) ಯೋಜನೆಗಾಗಿ ಕಾಯ್ದೆರಿಸಲಾಗಿರುವ ಅನುದಾನದಿಂದ ಬಿಡುಗಡೆ ಮಾಡಬೇಕಾಗಿದೆ.

